# ಶಬ್ದಾರ್ಥಗಳು

## ಅ

**ಅಕಾಶಿಯಾ** ಅಥವಾ ''ಶಿಟ್ಟೀಮ್,'' ಜೋರ್ಡನ್ ನದಿಯ ಪೂರ್ವದಿಕ್ಕಿನಲ್ಲಿರುವ ಒಂದು ಊರು.

**ಅಪೊಸ್ತಲರು** ವಿಶೇಷ ಸಹಾಯಕರಾಗಿ ಯೇಸುವಿನಿಂದ ಆರಿಸಲ್ಪಟ್ಟವರು.

**ಅತ್ಯುನ್ನತವಾದ ಬೆಟ್ಟ** ಅಕ್ಷರಶಃ, ''ದೇವರ ಪರ್ವತ ಶ್ರೇಣಿ.''

**ಅನಾಕ ವಂಶಸ್ಥರು** ಅನಾಕನ ವಂಶದವರು. ಇವರು ಎತ್ತರವಾದ ಮತ್ತು ಬಲಶಾಲಿಗಳಾದ ಯೋಧರು ಎಂದು ಪ್ರಸಿದ್ಧರಾಗಿದ್ದರು. ಅರಣ್ಯಕಾಂಡ 13:33

**ಅಪ್ಪಾ** ಮೂಲ ಪದ ಅರಮೇಯಿಕ್ ಭಾಷೆಯ ''ಅಬ್ಬಾ'' ಇದರರ್ಥ ''ಅಪ್ಪಾ.''

**ಅನಾತ** ಇದು ಕಾನಾನ್ಯರ ಯುದ್ಧದೇವತೆಯ ಹೆಸರು. ಇಲ್ಲಿ ಅದು ಶಮ್ಗರನ ತಂದೆಯ ಹೆಸರು ಎಂದು ಇದ್ದರೂ ತಾಯಿಯ ಹೆಸರೂ ಆಗಿರುವ ಸಂಭವವಿದೆ.

**ಅಜಾಜೇಲ** ಅಥವಾ ''ಪ್ರಾಯಶ್ಚಿತ್ತ ಪಶು.'' ಈ ಪದದ ಸ್ಪಷ್ಟ ಅರ್ಥ ತಿಳಿದಿಲ್ಲ. ಈ ಹೋತವು ಜನರ ಪಾಪಗಳನ್ನು ''ಹೊತ್ತುಕೊಂಡು ಹೋಗಿದೆ'' ಎಂಬ ಪ್ರಾಮುಖ್ಯ ಆಲೋಚನೆಯನ್ನು ಕೊಡಬಹುದಾಗಿದೆ.

**ಅಬಾರೀಮ್** ಈ ಪರ್ವತಗಳು ಜೋರ್ಡನ್ ನದಿಯ ಪೂರ್ವ ದಿಕ್ಕಿನಲ್ಲಿದ್ದ ಮರುಭೂಮಿಯಲ್ಲಿದ್ದವು.

**ಅಬ್ರೋನ್** ಅಥವಾ ''ಎಬ್ರೋನ್''

**ಅಧಿಕೃತ ಅಳತೆ** ಅಕ್ಷರಶಃ ''ಪವಿತ್ರ ಶೆಕೆಲ್ ''ದೇವದರ್ಶನಗುಡಾರದಲ್ಲಿ ಉಪಯೋಗಿಸುತ್ತಿದ್ದ ಅಧಿಕೃತವಾದ ಅಳತೆಮಾನ.

**ಅಮವಾಸ್ಯೆ** ಇದು ಹೀಬ್ರೂ ತಿಂಗಳ ಮೊದಲನೆ ದಿನವಾಗಿತ್ತು. ಈ ದಿನಗಳಲ್ಲಿ ದೇವರನ್ನು ಆರಾಧಿಸುವುದಕ್ಕಾಗಿ ವಿಶೇಷ ಕೂಟಗಳನ್ನು ನಡೆಸಲಾಗುತ್ತಿತ್ತು.

**ಆಯುಧ** ರಣವೀರನು ಸ್ವರಕ್ಷಣೆಗಾಗಿ ತನ್ನಲ್ಲಿ ಇಟ್ಟುಕೊಂಡಿರುವ ಲೋಹದ ಕವಚವುಳ್ಳ 'ಒರೆ.'

**ಅಬೀಬ್** ಅಥವಾ ''ಚೈತ್ರಮಾಸ'' ಯೆಹೂದ್ಯರ ವರ್ಷದಲ್ಲಿ ಇದು ಪ್ರಥಮ ತಿಂಗಳು.

**ಅಮಾಲೇಕ್ ಪರ್ವತ** ಎಫ್ರಾಯೀಮ್ಯರು ನೆಲೆಸಿದ ಪ್ರದೇಶದ ಭಾಗ.

**ಅರೂಮ ನಗರ** ಅಥವಾ''ತೊರಮಾ'' ಅಬೀಮೆಲೆಕನು ಅರಸನಾಗಿದ್ದ ನಗರ. ಶೆಕೆಮಿನ ದಕ್ಷಿಣಕ್ಕೆ 8 ಮೈಲಿ ಮೇಲೆ ಇದ್ದಿರಬಹುದು.

**ಅಮಾವಾಸ್ಯೆಯ ಸಮಾರಂಭ** ಯೆಹೂದ್ಯರ ತಿಂಗಳ ಮೊದಲನೆ ದಿನ. ಈ ದಿನವು ವಿಶ್ರಾಂತಿಗೆ ಮತ್ತು ಆರಾಧನೆಗೆ ವಿಶೇಷವಾದ ದಿನ.

**ಅಮ್ನೋನ್** ಅಮ್ನೋನನು ಅಬ್ಷಾಲೋಮ ಮತ್ತು ತಾಮಾರಳ ಅರ್ಧ ಸೋದರನು. ಅವರೆಲ್ಲರಿಗೂ ದಾವೀದನೇ ತಂದೆ. ಆದರೆ ಅಮ್ನೋನನ ತಾಯಿಯು ಬೇರೆ.

**ಅಲ್ಲೋನ್ ಬಾಕೂತ್** ಇದರರ್ಥ ''ದುಃಖದ ಓಕ್‌ಮರ.''

**ಅರ್ತೆಮಿ** ಗ್ರೀಕ್‌ರ ದೇವತೆ. ಏಷ್ಯಾ ಮೈನರ್‌ನ ಜನರು ಈಕೆಯನ್ನು ಆರಾಧಿಸುತ್ತಿದ್ದರು.

**ಅಶೇರ್** ಇದರರ್ಥ: ''ಸಂತೋಷ'' ''ಆಶೀರ್ವಾದಶಾಲಿ.''

**ಅಶುದ್ಧ** ದೇವಾರಾಧನೆಗೆ ಸ್ವೀಕೃತವಾದದ್ದಲ್ಲ.

**ಅಶೇರ** ಕಾನಾನ್ಯರ ಮುಖ್ಯದೇವತೆ. ಅವಳು ಬಾಳನ ಹೆಂಡತಿಯೆಂದು ಜನರು ಆಗ ಭಾವಿ ಸಿದ್ದರು.

**ಅಷ್ಕೆಲೋನ್** ಫಿಲಿಷ್ಟಿಯರ ಐದು ರಾಜ್ಯಗಳಲ್ಲಿ ಒಂದು.

**ಅಷ್ಟೋರೆತ್** ಜನರು ಮಕ್ಕಳನ್ನು ಪಡೆಯಲು ಈ ಸುಳ್ಳು ದೇವತೆಯು ಅವರನ್ನು ಸಮರ್ಥರನ್ನಾಗಿಸುತ್ತಾಳೆಂದು ಕಾನಾನಿನ ಜನರು ನಂಬಿದ್ದರು. ಅವಳು ಅವರ ಪ್ರೇಮ ದೇವತೆಯಾಗಿದ್ದಳು.

## ಆ

**ಆದಿಯೂ ಅಂತ್ಯವೂ** ಇದು ಗ್ರೀಕ್ ಅಕ್ಷರಮಾಲೆಯ ಪ್ರಥಮ ಮತ್ತು ಕೊನೆಯ ಅಕ್ಷರವಾಗಿದೆ. ಈ ವಿಧದಲ್ಲಿ ದೇವರು ಪ್ರಾರಂಭಿಕನೂ ಮತ್ತು ಮುಕ್ತಾಯಗಾರನೂ ಆಗಿದ್ದಾನೆ.

**ಆಕೋರ್** ಈ ಹೆಸರಿನ ಅರ್ಥ ''ಕಷ್ಟ'' ಅಥವಾ ''ತೊಂದರೆ''.

**ಆಯಿ** ಈ ಊರಿನ ಹೆಸರಿನ ಅರ್ಥ ''ಪಾಳು'' ಎಂದಾಗುತ್ತದೆ.

**ಆರಾಮ್ ನಹರೇಮ್** ಉತ್ತರ ಸಿರಿಯಾದಲ್ಲಿ ಒಂದು ಪ್ರದೇಶ. ಆರಾಮ್ ಎಂದರೆ ಎರಡು ನದಿಗಳ ಮಧ್ಯದ ಪ್ರದೇಶ. ಯೂಫ್ರೇಟೀಸ್ ಮತ್ತು ಟೈಗ್ರಿಸ್ ಎಂಬ ಎರಡು ನದಿಗಳ ಮಧ್ಯದಲ್ಲಿ ಈ ಸ್ಥಳ ಇತ್ತು.

**ಆಲಯ** ಪವಿತ್ರಗುಡಾರ ದೇವರನ್ನು ಭೇಟಿಯಾಗಲು ಜನರು ಇಲ್ಲಿಗೆ ಹೋಗಬೇಕಾಗಿತ್ತು. ವಿಮೋಚನಕಾಂಡ 25:8,9ನ್ನು ನೋಡಿರಿ. ಯೆಹೂದ್ಯರ ಆರಾಧನೆಗಾಗಿ ಜೆರುಸಲೇಮಿನಲ್ಲಿದ್ದ ವಿಶೇಷ ಕಟ್ಟಡ.

**ಆಶ್ರಯಪಟ್ಟಣ** ಆಕಸ್ಮಿಕವಾಗಿ ಒಬ್ಬ ಇಸ್ರೇಲಿಯು ಬೇರೊಬ್ಬನನ್ನು ಕೊಂದರೆ, ಸತ್ತವನ ಸಂಬಂಧಿಕರ ಕೋಪದಿಂದ ತಪ್ಪಿಸಿಕೊಂಡು ಸುರಕ್ಷಿತವಾಗಿರಲು ಓಡಿಹೋಗಬಹುದಾಗಿದ್ದ ಪಟ್ಟಣ. ನೋಡಿ ಯೆಹೋಶುವ 20:1-9.

**ಆಮೆನ್** ಇಲ್ಲಿ ಇದಕ್ಕೆ ಯೇಸುಕ್ರಿಸ್ತ ಎಂಬ ಹೆಸರಿಗೆ ಅರ್ಥೈಸಲಾಗಿದೆ. ಈ ಹೀಬ್ರೂ ಪದದ ಅರ್ಥ ಹಾಗೆಯೇ ಆಗಲಿ ಅಥವಾ ನಿಜವಾಗಲಿ.

## ಇ

**ಇಬ್ರಿಯ** ಅಥವಾ ''ಇಸ್ರೇಲಿಯ.''

**ಇನ್ನೂರು ದಿನಾರಿ ನಾಣ್ಯ** ಒಬ್ಬನಿಗೆ ದೊರೆಯುತ್ತಿದ್ದ ಒಂದು ವರ್ಷದ ಆದಾಯ.

**ಇಥಿಯೋಪಿಯ** ಅಥವಾ ''ಕೂಷ್'' ಕೆಂಪು ಸಮುದ್ರದ ಬಳಿಯಿರುವ ಆಫ್ರಿಕಾದ ಒಂದು ದೇಶ.

**ಇಸ್ರೇಲ್** ಇದರ ಅರ್ಥ, ''ಅವನು ದೇವರಿ ಗೋಸ್ಕರ ಹೋರಾಡುತ್ತಾನೆ'' ಅಥವಾ ''ಅವನು ದೇವರೊಂದಿಗೆ ಹೋರಾಡುತ್ತಾನೆ.''

**ಇಸ್ಸಾಕಾರ್** ಇದರರ್ಥ: ''ಪ್ರತಿಫಲ'' ''ಸಂಬಳ.''

**ಇಸಾಕ** ಇದರರ್ಥ ''ಅವನು ನಗುತ್ತಾನೆ.''

**ಇಷ್ಮಾಯೇಲ** ಈ ಹೆಸರಿನ ಅರ್ಥ: ''ದೇವರು ಕೇಳುತ್ತಾನೆ.''

## ಈ

**ಈಜಿಪ್ಟ್** ಪುರಾತನ ಗ್ರೀಕ್ ಮತ್ತು ಸಮಾರ್ಯದ ಅನುವಾದಗಳಲ್ಲಿ ''ಈಜಿಪ್ಟ್ ಮತ್ತು ಕಾನಾನ್'' ಎಂದಿದೆ. ಅವರು ಅಬ್ರಹಾಮನ ಕಾಲದಿಂದ ವರ್ಷಗಳನ್ನು ಎಣಿಸಿದ್ದಾರೆಂದೂ ಅವರು ಯೋಸೇಫನ ಕಾಲ ದಿಂದ ಎಣಿಸಿಲ್ಲವೆಂದು ಇದು ಅರ್ಥ ಕೊಡುತ್ತಿದೆ ಆದಿಕಾಂಡ 15:12-16 ಮತ್ತು ಗಲಾತ್ಯ 3:17ರಲ್ಲಿ ನೋಡಿ.

## ಉ

**ಉಪವಾಸ ದಿನ** ಯೆಹೂದ್ಯರ ಈ ಪವಿತ್ರ ದಿನ ಬಂದ ಮೇಲೆ ಚಳಿಗಾಲ ಆರಂಭವಾಗುತ್ತದೆ. ಸಮುದ್ರದ ಮೇಲೆ ಚಂಡಮಾರುತಗಳು ಬರುವ ಕಾಲವದು.

**ಉಯಿಲು** ಒಬ್ಬ ವ್ಯಕ್ತಿಯು ಸತ್ತಮೇಲೆ, ತನ್ನ ವಸ್ತುಗಳು ಯಾರಿಗೆ ಸೇರಬೇಕೆಂದು ಬರೆದಿಡುವ ಒಂದು ಪತ್ರ. ಅದನ್ನು 'ಮರಣ ಶಾಸನ'ವೆಂದೂ ಕರೆಯುವರು.

**ಉದ್ದಮೊಳ** ಅಕ್ಷರಶಃ ''ಒಂದು ಮೊಳ ಮತ್ತು ಒಂದು ಕೈಹಿಡಿ.''

**ಉನ್ನತವಾದ ಪೂಜಾ ಸ್ಥಳಗಳು** ದೇವರನ್ನು ಅಥವಾ ಸುಳ್ಳು ದೇವರುಗಳನ್ನು ಆರಾಧಿಸಲು ಉಪಯೋಗಿಸುತ್ತಿದ್ದ ಸ್ಥಳ. ಈ ಸ್ಥಳಗಳು ಸಾಮಾನ್ಯವಾಗಿ ಬೆಟ್ಟಗುಡ್ಡಗಳ ಮೇಲೆ ಇರುತ್ತಿದ್ದವು.

## ಊ

**ಊರೀಮ್ ಮತ್ತು ತುಮ್ಮೀಮ್** ಪ್ರಶ್ನೆಗಳಿಗೆ ದೇವರ ಉತ್ತರವನ್ನು ಕಂಡುಕೊಳ್ಳಲು ಯಾಜಕರು ಇವುಗಳನ್ನು ಉಪಯೋಗಿಸುತ್ತಿದ್ದರು. ಚೀಟುಹಾಕಿ ನಿರ್ಣಯ ಮಾಡುವಂತೆ ಅವುಗಳನ್ನು ಬಳಸಲಾಗುತ್ತಿತ್ತು.

## ಎ

**ಎತ್ತರವಾದ ಸ್ಥಳಗಳು** ದೇವರನ್ನು ಅಥವಾ ಸುಳ್ಳು ದೇವರುಗಳನ್ನು ಆರಾಧಿಸುತ್ತಿದ್ದ ಸ್ಥಳ, ಸಾಮಾನ್ಯವಾಗಿ ಈ ಸ್ಥಳಗಳು ಬೆಟ್ಟಗುಡ್ಡಗಳ ಮೇಲಿರುತ್ತಿದ್ದವು.

**ಎಬರನು** ಹೀಬ್ರೂ ಜನರ ಮೂಲ ಪಿತೃ. ಅಕ್ಷರಶಃ, ''ಎಬರನ ಗಂಡುಮಕ್ಕಳ ತಂದೆ ಶೇಮನಿಗೆ ಹುಟ್ಟಿದವನು.''

**ಎಫ್ರಾತ** ಬೇತ್ಲೆಹೇಮಿನ ಮತ್ತೊಂದು ಹೆಸರು. ದಾವೀದನು ಹುಟ್ಟಿದ ಪಟ್ಟಣ.

**ಎರಡನೆ ತಿಂಗಳಿನ ಹದಿನೈದನೆಯ ದಿನದಲ್ಲಿ** ವೈಶಾಖ ಮಾಸದ ಹದಿನೈದನೆಯ ದಿನ. ಇಸ್ರೇಲರು ಒಂದು ತಿಂಗಳಿಂದ ಪ್ರಯಾಣ ಮಾಡು ತ್ತಿದ್ದರು.

**ಎಲೀಯೆಜರ್** ಈ ಹೆಸರಿನ ಅರ್ಥ, ''ನನ್ನ ದೇವರ ಸಹಾಯ.''

**ಎಲೀಯ** ಸುಮಾರು ಕ್ರಿ. ಪೂ. 850ರಲ್ಲಿ ಜೀವಿಸಿದ್ದ ಪ್ರವಾದಿ.

**ಎಷ್ಕೋಲ್** ಹೀಬ್ರೂ ಭಾಷೆಯಲ್ಲಿ ಈ ಪದದ ಅರ್ಥ ''ದ್ರಾಕ್ಷಿಯ ಗೊಂಚಲು.''

## ಏ

**ಏದೋಮ್** ಈ ಹೆಸರಿನ ಅರ್ಥ: ''ಕೆಂಪು.''

**ಏದೋಮ್** ಈ ಪ್ರದೇಶವು ಇಸ್ರೇಲಿನ ದಕ್ಷಿಣ ಮತ್ತು ಪೂರ್ವಕ್ಕೆ ಇದೆ.

**ಏನ್ ಹಕ್ಕೋರೇ** ಇದರರ್ಥ ''ಕರೆದವನ ಬುಗ್ಗೆ.''

**ಏಫೋದ್** ಇದು ಏನೆಂಬುದು ನಮಗೆ ಸರಿಯಾಗಿ ಗೊತ್ತಿಲ್ಲ. ಇದೊಂದು ವಿಶೇಷವಾದ ಕೋಟು, 'ಮೇಲಂಗಿ' ಆಗಿರಬಹುದು ಅಥವಾ ಇದೊಂದು ವಿಗ್ರಹವೂ ಆಗಿರಬಹುದು. ಯಾಜಕರು ಧರಿಸುತ್ತಿದ್ದ ವಿಶೇಷ ಮೇಲಂಗಿ. ವಿಮೋಚನಕಾಂಡ 28:6-14 ನೋಡಿರಿ.

**ಏಲ್** ಹೀಬ್ರೂ ಭಾಷೆಯಲ್ಲಿ ದೇವರ ಹೆಸರು.

**ಏನದು** ಇಬ್ರಿಯ ಭಾಷೆಯಲ್ಲಿ ಇದು ''ಮನ್ನ'' ಎಂಬ ಪದದಂತಿದೆ.

**ಏಲ್ ಬೆರೀತ್** ಈ ದೇವರ ಹೆಸರಿನ ಅರ್ಥ ''ಒಡಂಬಡಿಕೆಯ ದೇವರು.''

**ಏಸಾವ್** ಈ ಪದದ ಅರ್ಥ: ''ಕೂದಲುಳ್ಳವನು.'' ಇವನು ಯಾಕೋಬನ ಅವಳಿ ಸಹೋದರ.

## ಓ

**ಒಡಂಬಡಿಕೆ** ಅಕ್ಷರಶಃ ''ಆಧಾರ'' ಹತ್ತು ಆಜ್ಞೆಗಳು ಬರೆಯಲ್ಪಟ್ಟಿದ್ದ ಎರಡು ಕಲ್ಲಿನ ಹಲಗೆಗಳು. ದೇವರು ಮತ್ತು ಇಸ್ರೇಲರ ನಡುವೆ ಆದ ಒಡಂಬ ಡಿಕೆಗೆ ಪುರಾವೆಗಳಾಗಿದ್ದವು.

**ಒಡಂಬಡಿಕೆಯ ಪೆಟ್ಟಿಗೆ** ಅಥವಾ ಒಡಂಬಡಿಕೆಯ ಮಂಜೂಷ. ಇಸ್ರೇಲರು ಸೀನಾಯ್ ಮರುಭೂಮಿಯಲ್ಲಿ ಇದ್ದಾಗ ಅವರೊಂದಿಗೆ ದೇವರಿದ್ದಾನೆಂದು ತೋರಿಸಿ ಕೊಡುವ ದೈವಾಜ್ಞೆಗಳನ್ನು ಕೆತ್ತಲ್ಪಟ್ಟ ಚಪ್ಪಟವಾದ ಕಲ್ಲುಗಳು ಮತ್ತು ಇತರ ಪದಾರ್ಥಗಳನ್ನು ಹೊಂದಿದ ಪೆಟ್ಟಿಗೆ.

**ಒಡಂಬಡಿಕೆ ಮತ್ತು ವಾಗ್ದಾನಗಳು** ಬಹುಶಃ ಇದು ಮೋಶೆಯ ಧರ್ಮಶಾಸ್ತ್ರ ಅಂದರೆ ದೇವರು ಇಸ್ರೇಲ್ ಜನರೊಂದಿಗೆ ಮಾಡಿಕೊಂಡ ಒಡಂಬಡಿಕೆ.

**ಒಡಂಬಡಿಕೆ** ಉಪ್ಪು ಒಡಂಬಡಿಕೆಗೆ ಗುರುತಾಗಿದೆ. ಶಾಶ್ವತವಾದ ಒಡಂಬಡಿಕೆಯು ''ಉಪ್ಪಿನ ಒಡಂಬಡಿಕೆ''ಯಾಗಿದೆ. ಅರಣ್ಯಕಾಂಡ 18:19. ಏಕೆಂದರೆ ಹುಳಹಿಡಿಯದಂತೆ ಕಾಪಾಡಲು ಉಪ್ಪನ್ನು ಬಳಸಲಾಗುತ್ತದೆ.

## ಕ

**ಕಹಿ ಮರ** ಇದು ಒಂದು ವಿಶೇಷ ಗಿಡದ ಹೆಸರು. ಆದರೆ ಇಲ್ಲಿ ಇದು ದುಃಖದ ಸಂಕೇತವನ್ನು ಸೂಚಿಸುತ್ತದೆ.

**ಕನ್ಯೆಯಾದ ಮಗಳು** ಇದು ಜೆರುಸಲೇಮಿನ ಇನ್ನೊಂದು ಹೆಸರು.

**ಕಬ್ಬಿಣದ ಕೊಂಬುಗಳು** ಉನ್ನತ ಶೌರ್ಯಕ್ಕೆ ಇವು ಸಂಕೇತಗಳು.

**ಕಾದೇಶ್ ಅರಣ್ಯ** ಸಿರಿಯಾದಲ್ಲಿರುವ ಒಂದು ಮರುಭೂಮಿ. ''ಪರಿಶುದ್ಧ ಮರುಭೂಮಿ'' ಎಂಬ ಅರ್ಥವನ್ನು ಸಹ ಕೊಡಬಹುದು.

**ಕಾಬೂಲ್ ದೇಶವೆಂದು** ಹೀಬ್ರೂ ಭಾಷೆಯಲ್ಲಿ ಕಾಬೂಲ್ ಎಂದರೆ ''ಬೆಲೆಯಿಲ್ಲದ್ದು'' ಎಂದರ್ಥ.

**ಕ್ಯಾಲಮಸ್** ಒಂದು ಬಗೆಯ ಜೊಂಡು ಸಸ್ಯ. ಇದನ್ನು ಪರಿಮಳದ್ರವ್ಯಕ್ಕಾಗಿ ಉಪಯೋಗಿಸು ತ್ತಿದ್ದರು.

**ಕಾಯಿನ** ಹೀಬ್ರೂ ಭಾಷೆಯಲ್ಲಿ ಈ ಪದದ ಅರ್ಥ ''ನಿರ್ಮಿಸು'' ಅಥವಾ ''ಪಡೆದುಕೊ.''

**ಕ್ಲಾಡಿಯಸ್** ರೋಮ್ ಚಕ್ರವರ್ತಿ.

**ಕ್ರಿಸ್ತನು** ಇದರರ್ಥ 'ಅಭಿಷಿಕ್ತನು' (ಮೆಸ್ಸೀಯನು) ಅಥವಾ ದೇವರಿಂದ ಆರಿಸಲ್ಪಟ್ಟವನು.

**ಕ್ಷಿತಿಜ** ಆಕಾಶವು ಭೂಮಿಯನ್ನು ಸಂಧಿಸುವಂತೆ ಕಾಣುವ ಬಹುದೂರದ ರೇಖೆ.

**ಕೀಷೋನ್ ನದಿ** ಈ ನದಿಯು ತಾಬೋರ್ ಪರ್ವತದಿಂದ ಹತ್ತು ಮೈಲಿ ದೂರದಲ್ಲಿದೆ.

**ಕುಷ್ಠರೋಗ** ಹೀಬ್ರೂ ಭಾಷೆಯಲ್ಲಿ ಈ ಪದವು ಬೂಷ್ಟು ಮತ್ತು ಚರ್ಮರೋಗಗಳನ್ನು ಒಳಗೊಂಡಿದೆ. ಕೇವಲ ಕುಷ್ಠರೋಗವನ್ನು ಮಾತ್ರವಲ್ಲ.

**ಕೂಷ್** ಇಥಿಯೋಪಿಯಾದ ಮತ್ತೊಂದು ಹೆಸರು.

**ಕೆರೇತ್ಯ ಮತ್ತು ಪೆಲೇತ್ಯರು** ದಾವೀದನ ವಿಶೇಷ ಅಂಗರಕ್ಷಕ ಪಡೆ. ಪುರಾತನ ಅರಾಮಿಕ್ ಅನುವಾದದ ರೀತಿ ''ಬಿಲ್ಲುಗಾರರು ಮತ್ತು ಕಲ್ಲೆಸೆತದಲ್ಲಿ ನಿಪುಣರು'' ಎಂದು.

**ಕೆನೆತ** ಕುದುರೆ ಮಾಡುವ ಧ್ವನಿ.

**ಕೆಮೋಷ್** ಮಿಲ್ಕಾಮ ಅಮೋನಿಯರ ದೇವರಾದರೂ ಮೋವಾಬ್ಯರ ರಾಷ್ಟ್ರೀಯ ದೇವರು ಕೆಮೋಷ.

**ಕೆರೂಬಿದೂತರು** ದೇವರ ವಿಶೇಷ ದೂತರು; ಒಡಂಬಡಿಕೆ ಪೆಟ್ಟಿಗೆಯ ಮೇಲೆ ಈ ದೂತರುಗಳ ಪ್ರತಿಮೆಗಳಿದ್ದವು.

**ಕೆರೇತ್ಯರು** ಅಥವಾ ''ಕ್ರೇಟಿನ ಜನರು.'' ಬಹುಶಃ ಇವರು ಫಿಲಿಷ್ಟಿಯರು ಇರಬಹುದು.

**ಕೇಸರ** ಕುದುರೆಯ ಕುತ್ತಿಗೆ ಮೇಲಿರುವ ಕೂದಲು.

**ಕೊಂಡಾಡಿರಿ** ಮೂಲಗ್ರಂಥದಲ್ಲಿ ''ಹೊಸನ್ನ' ಎಂಬ ಹೀಬ್ರೂ ಪದವನ್ನು ಬಳಸಲಾಗಿದೆ. ಈ ಪದದ ಅರ್ಥ ''ರಕ್ಷಿಸು.'' ಇದನ್ನು ''ಕೊಂಡಾಡಿರಿ'' ಎಂಬರ್ಥದಲ್ಲಿ ಬಳಸಲಾಗಿದೆ.

**ಕ್ರೌಂಚ** ಅಕ್ಷರಶಃ ಬುಜರ್ಡ್ ಡೇಗೆ ಜಾತಿಯ ಒಂದು ಪಕ್ಷಿ.

## ಗ

**ಗತ್** ಫಿಲಿಷ್ಟಿಯರ ರಾಜಧಾನಿ.

**ಗತ್‌ನ ಓಬೇದೆದೋಮ್** ಜೆರುಸಲೇಮಿನ ಸಮೀಪದಲ್ಲಿ ವಾಸಿಸುತ್ತಿದ್ದ ಲೇವಿಯರ ಕುಲಕ್ಕೆ ಸೇರಿದ ಒಬ್ಬ ವೃದ್ಧ.

**ಗಲೀದ್** ಇನ್ನೊಂದು ಹೆಸರು ಗಿಲ್ಯಾದ್ ಈ ಪದದ ಅರ್ಥ: ''ಒಡಂಬಡಿಕೆಯ ಕಲ್ಲಿನ ಗುಡ್ಡೆ.''

**ಗಾದ್ಯರು** ಇಸ್ರೇಲಿನ ಒಂದು ಕುಲ. ಅವರ ಭೂಮಿ ಅಮ್ಮೋನ್ ದೇಶಕ್ಕೆ ಹತ್ತಿರದಲ್ಲಿತ್ತು.

**ಗಾದ್** ಇದರರ್ಥ:''ಅದೃಷ್ಟವಂತ'' ಭಾಗ್ಯವಂತ.''

**ಗಿಬೆಯತ್ ಹಾರಲೋತ್** ''ಸುನ್ನತಿ ಬೆಟ್ಟ'' ಎಂದೂ ಹೇಳುವರು.

**ಗುಡಾರ** ಯಜ್ಞವೇದಿಕೆಯನ್ನು ಹೊಂದಿರುವ ದೇವಾಲಯದಂತೆ ಈ ಗುಡಾರವನ್ನು ಆರಾಧನಾ ಸ್ಥಳವನ್ನಾಗಿ ಉಪಯೋಗಿಸಲಾಗುತ್ತಿತ್ತು. ಇದನ್ನು ಸ್ಥಳದಿಂದ ಸ್ಥಳಕ್ಕೆ ತೆಗೆದುಕೊಂಡು ಹೋಗಬಹುದಾಗಿತ್ತು.

**ಗಿಲ್ಗಾಲ್** ಹೀಬ್ರೂ ಭಾಷೆಯಲ್ಲಿ ಈ ಪದಕ್ಕೆ ''ಉರುಳಿ ಬೀಳು'' ಎಂಬರ್ಥವಿದೆ.

**ಗುಗ್ಗುಲ** ಅತ್ಯಂತ ಬೆಲೆಬಾಳುವ ಸುಗಂಧ ವಾಸನೆಯುಳ್ಳ ಗೋಂದು.

**ಗೆರಿಜ್ಜೀಮ್ ಪರ್ವತ** ಇದು ಶೆಕೆಮಿನ ಪಕ್ಕದಲ್ಲಿದೆ.

**ಗೇರ್ಷೋಮ್** ಈ ಹೆಸರು, ''ಅಲ್ಲಿ ಪರದೇಶಿ'' ''ಅನ್ಯದೇಶದಲ್ಲಿ ಪ್ರವಾಸಿಗ'' ಎಂಬ ಅರ್ಥವನ್ನು ಕೊಡುವ ಇಬ್ರಿಯ ಪದಗಳಂತಿದೆ.

**ಗೋಣೀತಟ್ಟು** ದುಃಖವನ್ನು ಸೂಚಿಸುವುದಕ್ಕಾಗಿ ಸುತ್ತಿಕೊಳ್ಳುವ ವಸ್ತ್ರ

**ಗೋರಂಟಿ** ಪರಿಮಳಭರಿತವಾದ ಸಸಿ. ಇದರಲ್ಲಿ ನೀಲಿ ಮತ್ತು ಹಳದಿ ಮಿಶ್ರಿತವಾದ ಹೂವುಗಳು ಗುಂಪು ಗುಂಪಾಗಿ ಬೆಳೆಯುತ್ತವೆ.

**ಗೋಮೇಧಿಕ ರತ್ನ** ನೀಲಿ ಅಥವಾ ಕಂದು ಬಣ್ಣಗಳ ಅನೇಕ ಪದರುಗಳುಳ್ಳ ಅಮೂಲ್ಯವಾದ ಕಲ್ಲು.

## ಚ

**ಚಲ್ಮೋನ್ ಬೆಟ್ಟ** ಇದು ಶೆಕೆಮಿನ ಹತ್ತಿರ ಇದ್ದ ಏಬಾಲ್ ಬೆಟ್ಟದ ಇನ್ನೊಂದು ಹೆಸರಾಗಿರ ಬಹುದು.

**ಚುಕ್ಕಾಣಿ** ಹಡಗು ದಿಕ್ಕು ಬದಲಾಯಿಸಲು ಸಹಾಯ ಮಾಡುವ ಒಂದು ಸಾಧನ.

**ಚಿಯೋನ್** ಯಾವ ಬೆಟ್ಟದ ಮೇಲೆ ಜೆರುಸಲೇಮ್ ಕಟ್ಟಲ್ಪಟ್ಟಿದೆಯೊಆ ಬೆಟ್ಟದ ಆಗ್ನೇಯ ಭಾಗ. ಕೆಲವು ಸಲ ಇದು, ಜೆರುಸಲೇಮಿನಲ್ಲಿ ವಾಸಿಸುತ್ತಿರುವ ದೇವರ ಜನರು ಎಂಬ ಅರ್ಥವನ್ನು ಕೊಡುತ್ತದೆ.

**ಚಿಯೋನಿನ ಮಗಳು, ಚೀಯೋನ್ ಕುಮಾರಿ** ಜೆರುಸಲೇಮ್ ನಗರದ ಇನ್ನೊಂದು ಹೆಸರು.

**ಚೌಕ** ನಗರದ ಬಯಲು ಪ್ರದೇಶ. ಇದು ನಗರ ದ್ವಾರಗಳ ಸಮೀಪದಲ್ಲಿತ್ತು. ಪ್ರಯಾಣಿಕರು ನಗರಕ್ಕೆ ಬಂದಾಗ ಈ ಸ್ಥಳದಲ್ಲಿ ಇಳಿದುಕೊಳ್ಳುತ್ತಿದ್ದರು.

## ಜ

**ಜಲೋದರ** ಈ ರೋಗದಿಂದ ದೇಹ ಉಬ್ಬುತ್ತಾ ಹೋಗುವುದು.

**ಜ್ಯೂಬಿಲಿ** 'ಈ ಸಮಯದಲ್ಲಿ ಊದುವ ತುತ್ತೂರಿಗೆ ಇರುವ ಹೀಬ್ರೂ ಪದದಿಂದ ಈ ಪದವು ಬಂದಿದೆ.

**ಜಿಮ್ರಿ** ಅನೇಕ ವರ್ಷಗಳ ಹಿಂದೆ ಏಲಾ ಮತ್ತು ಇಸ್ರೇಲಿನ ಬಾಷಾನ ಕುಟುಂಬದವರನ್ನು ಕೊಂದ ವನೇ ಜಿಮ್ರಿ.

**ಜೆಬೂಲೂನ್** ಇದರರ್ಥ: ''ಸ್ತೋತ್ರ'' ಅಥವಾ ''ಸನ್ಮಾನ.''

**ಜೆಯುಸ್** ಅನೇಕ ಗ್ರೀಕ್ ದೇವರುಗಳಲ್ಲಿ ಅತ್ಯಂತ ಪ್ರಮುಖನಾದ ದೇವರು.

**ಜೆರುಬ್ಬಾಬೆಲ್** ಶೆಷ್ಬಚ್ಚರ ಎಂದು ಸಹ ಕರೆ ಯುತ್ತಾರೆ.

## ತ

**ತಬೇರ** ಅಂದರೆ ''ಉರಿಯುವಿಕೆ.''

**ತಲಾಂತು** ಒಂದು ತಲಾಂತು ಅಂದರೆ 30,000 ದಿನಾರಿ. ಒಂದು ದಿನಾರಿ ಅಂದರೆ ಒಬ್ಬನ ಒಂದು ದಿನದ ಸಂಬಳ.

**ತಿಂಗಳು** ಮಾರ್ಚ್ ತಿಂಗಳ ಮಧ್ಯ ಭಾಗದಿಂದ ಏಪ್ರಿಲ್ ತಿಂಗಳ ಮಧ್ಯ ಭಾಗದವರೆಗೆ.

**ತಿದಿ** ಬೆಂಕಿಗೆ ಗಾಳಿ ಬೀಸುವಂತೆ ಮಾಡುವ ಉಪಕರಣ.

**ತ್ರಿಛತ್ರ** ರೋಮಿನಿಂದ 30 ಮೈಲಿ ದೂರದಲ್ಲಿದೆ.

**ತಾಮ್ರದ ನಾಣ್ಯಗಳು** ಯೆಹೂದ್ಯರ ಅತ್ಯಂತ ಸಣ್ಣ ನಾಣ್ಯ.

**ತೇಮಾನ್** ಈ ಪಟ್ಟಣವು ಎದೋಮಿನ ಉತ್ತರ ಭಾಗದಲ್ಲಿ ಇತ್ತು.

**ತೊಣಚಿ** ಹಸುಗಳ ಮತ್ತು ಎತ್ತುಗಳ ಸುತ್ತಲೂ ಹಾರುತ್ತಾ ಕಚ್ಚುವ ಚಿಟ್ಟೆ.

## ದ

**ದಂಡು** ಅಂದರೆ 6000 ಸೈನಿಕರುಳ್ಳ ಸೈನ್ಯ ದಳ.

**ದಾನ್** ಅರ್ಥ: ''ನಿರ್ಧರಿಸು'' ''ನ್ಯಾಯ ತೀರಿಸು.''

**ದಾವೀದ** ಇಸ್ರೇಲಿನ ಇನ್ನೊಬ್ಬ ರಾಜ.

**ದಾವೀದನಗರ** ಜೆರುಸಲೇಮ್ ನಗರದ ಒಂದು ಭಾಗ.

**ದಾಸಿ** ಅಥವಾ, ''ವೇಶ್ಯೆ'' ಗಂಡಸಿಗೆ ಗುಲಾಮಳಾಗಿ ಹೆಂಡತಿಯಂತೆ ಇರುವ ಹೆಣ್ಣು.

**ದಾವೀದನ ಮಗನು** ದಾವೀದನ ವಂಶದವನು. ದಾವೀದನು ಇಸ್ರೇಲಿನ ಎರಡನೆ ರಾಜ. ಕ್ರಿಸ್ತನು ಹುಟ್ಟುವುದಕ್ಕಿಂತ ಒಂದು ಸಾವಿರ ವರ್ಷಗಳ ಹಿಂದೆ ಇವನು ರಾಜನಾಗಿದ್ದನು.

**ದಾಗೋನ** ಕಾನಾನ್ಯರು ಈ ಸುಳ್ಳು ದೇವರನ್ನು ಪೂಜಿಸುತ್ತಿದ್ದರು. ಒಳ್ಳೆ ಬೆಳೆಕೊಡುವ ದೇವರೆಂದು ಅವರ ಭಾವನೆಯಾಗಿತ್ತು. ಫಿಲಿಷ್ಟಿಯರ ಮುಖ್ಯ ವಾದ ದೇವರು.

**ದ್ವಾರ** ಜನರು ತಮ್ಮ ಎಲ್ಲಾ ವ್ಯವಹಾರಗಳನ್ನು ಮಾಡಲು ಬಂದು ಸೇರುವ ಸ್ಥಳ. ನ್ಯಾಯಸ್ಥಾನದ ಅನೇಕ ಮೊಕದ್ದಮೆಗಳು ನಡೆಯುವ ಸ್ಥಳವೂ ಇದೇ.

**ದೆಕಪೊಲಿ** ಅಂದರೆ ಹತ್ತು ಊರುಗಳು.

**ದೇವಪುತ್ರರು** ''ಯಾಜಕರು'' ಅಥವಾ ''ದೇವ ದೂತರು'' ಎಂಬರ್ಥ ವನ್ನು ಇದು ಕೊಡುತ್ತದೆ.

**ದೇವದರ್ಶನದ ಗುಡಾರ** ಬಹುಶಃ ನಿಜವಾದ ದೇವದರ್ಶನಗುಡಾರವನ್ನು ನಿರ್ಮಿಸುವ ಮೊದಲು ಮೋಶೆಯು ಈ ಗುಡಾರವನ್ನು ಉಪಯೋಗಿಸಿ ದನು. ಪವಿತ್ರವಾದ ಗುಡಾರ. ಇಸ್ರೇಲಿನ ಜನರು ದೇವರ ದರ್ಶನಕ್ಕಾಗಿ ಅಲ್ಲಿಗೆ ಹೋಗುತ್ತಿದ್ದರು.

**ದೇವರ ನಿಜವಾದ ಪರ್ವತ** ಅಕ್ಷರಶಃ ''ಅತ್ಯಂತ ಎತ್ತರವಾದ ಜಾಫೋನ್.'' ಕಾನಾನ್ಯರ ಪುರಾಣದ ಪ್ರಕಾರ ಜಾಫೋನ್ ಎತ್ತರವಾದ ಪರ್ವತವಾಗಿತ್ತು ಮತ್ತು ಒಲಂಪಸ್ ಬೆಟ್ಟದಂತೆ ದೇವರುಗಳ ಪವಿತ್ರ ಬೆಟ್ಟವಾಗಿತ್ತು.

**ದ್ರವ** ತೊಳೆಯಲು ಉಪಯೋಗಿಸುವ ಉಪ್ಪು ಮಿಶ್ರಿತವಾದ ದ್ರವ.

**ದೇಶಾಭಿಮಾನಿ** ಅಕ್ಷರಶಃ ಉಗ್ರಗಾಮಿ. ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಯೆಹೂದ್ಯರ ರಾಜಕೀಯ ಪಂಗಡಕ್ಕೆ ಸೇರಿದವನಾಗಿದ್ದನು.

**ದೈವನಿರ್ಣಯದ ಪದಕ** ಮಹಾಯಾಜಕರ ಎದೆಯ ಮೇಲ್ಭಾಗದಲ್ಲಿ ಕಟ್ಟಲಾಗುತ್ತಿದ್ದ ಬಟ್ಟೆ. ಇದು ಗಲ್ಲಪಟ್ಟಿಯಂತಿರುತ್ತಿತ್ತು.

**ದ್ರಾಕ್ಷಾರಸದ ಬುದಲಿ** ಪ್ರಾಣಿಗಳ ಚರ್ಮದಿಂದ ಮಾಡಿದ ಚೀಲ. ತೀಕ್ಷ್ಣವಾದ ಮದ್ಯವನ್ನು ಹಾಕಿಡಲು ಉಪಯೋಗಿಸುತ್ತಿದ್ದರು.

## ಧಾ

**ಧಾನ್ಯ ನೈವೇದ್ಯ** ಜ್ಞಾಪಕಾರ್ಥ ಭಾಗವನ್ನು ಅರ್ಪಿಸಿದ ನಂತರ ಉಳಿದ ಭಾಗವು ಯಾಜಕನಿಗೆ ಸೇರಿದ್ದು. ಯಾಜಕಕಾಂಡ 2:35.

## ನ

**'ನಜರೇತಿನವನು'** ಇದಕ್ಕೆ ಸಮರ್ಪಕವಾದ ಹಳೆ ಒಡಂಬಡಿಕೆಯ ವಚನ ತಿಳಿಯದು. ಒಂದು ವೇಳೆ ''ನಾಜೀರ'' ಎನಿಸಿಕೊಂಡಿದ್ದ ಅಂದರೆ ದೇವರಿಗೆ ''ಅಭಿಷೇಕಿಸಲ್ಪಟ್ಟಿದ್ದ ಸಂಸೋನನೊಡನೆ ಯೇಸುವನ್ನು ''ನಜರೇತಿನವನು'' ಎಂದು ಹೋಲಿಸಿದ್ದಿರಬಹುದು. ನ್ಯಾಯಸ್ಥಾಪಕರು 13:5,7

**ನಫ್ತಾಲಿ** ಈ ಪದದ ಅರ್ಥ: ''ನನ್ನ ಹೋರಾಟ.''

**ನಾದಾಬ್, ಅಬೀಹು** ಆರೋನನ ಮಕ್ಕಳು.

**ನಾರ್ಡ್** ನಾರ್ಡ್ ಸಸಿಯ ಬೇರಿನ ಎಣ್ಣೆಯು ಅತ್ಯಂತ ಬೆಲೆ ಬಾಳುತ್ತದೆ. ಇದನ್ನು ಪರಿಮಳ ದ್ರವ್ಯದಂತೆ ಉಪಯೋಗಿಸುತ್ತಿದ್ದರು.

**ನಾಣ್ಯ** ತಾಮ್ರದ ನಾಣ್ಯ. ದಿನಾರಿಯಲ್ಲಿ ಹದಿನಾರನೆ ಒಂದು ಭಾಗ.

**ನಾಜೀರ** ದೇವರೊಂದಿಗೆ ವಿಶೇಷ ವಾಗ್ದಾನ ಮಾಡಿದ ವ್ಯಕ್ತಿ. ಹೀಬ್ರೂ ಭಾಷೆಯ ಈ ಶಬ್ದದ ಅರ್ಥ ''ಪ್ರತ್ಯೇಕಿಸಲ್ಪಟ್ಟವನು'' ಎಂದು.

**ನಾಬಾಲ್** ಈ ಹೆಸರಿಗೆ ''ದುಷ್ಟ'' ಎಂದರ್ಥ.

**ನೆಫೇಲಿಯರು** ಹೀಬ್ರೂ ಭಾಷೆಯಲ್ಲಿ ಈ ಪದದ ಅರ್ಥ ''ಬಿದ್ದು ಹೋದ ಜನರು'' ಬಳಿಕ ನೆಫೇಲಿಮ್ ಕುಟುಂಬವು ಅನೇಕ ವೀರರನ್ನು ಒಳಗೊಂಡ ಪ್ರಸಿದ್ಧ ಕುಟುಂಬವಾಗಿತ್ತು. ನೋಡಿ: ಅರಣ್ಯಕಾಂಡ 13: 32- 33.

**ನೆಬೋ ಪರ್ವತ** ಮೋವಾಬಿನಲ್ಲಿದ್ದ ಒಂದು ಪರ್ವತ.

**ನೊವೊಮಿ** ಸುಖ ಅಥವಾ ಸಂತೋಷ ಎಂದರ್ಥ.

**ನಿಷಿದ್ಧ** ಅಥವಾ ''ತ್ಯಾಜ್ಯ'' ''ಅಪರಿಶುದ್ಧ'' ದೇವರ ಪೂಜೆಯಲ್ಲಿ ಉಪಯೋಗಕ್ಕೆ ಅನರ್ಹವಾದದ್ದು. ನೋಡಿ ಯಾಜಕಕಾಂಡ 11-15.

**ನಿಕೋಲಾಯಿತರು** ಏಷ್ಯಾ ಮೈನರ್ ಪ್ರಾಂತ್ಯದಲ್ಲಿರುವ ಒಂದು ಧಾರ್ಮಿಕ ಗುಂಪು.

**ನೆಗೆವ್** ದಕ್ಷಿಣ ಯೆಹೂದದ ಮರುಳುಗಾಡು ಪ್ರದೇಶ.

**ನೋದು** ಇದರರ್ಥ ''ಅಲೆಮಾರಿ.''

**ನೋಹ** ಇದರರ್ಥ ''ವಿಶ್ರಾಂತಿ.''

## ಪ

**ಪವಿತ್ರಾತ್ಮ** ದೇವರ ಆತ್ಮನೆಂತಲೂ ಕ್ರಿಸ್ತನ ಆತ್ಮನೆಂತಲೂ ಸಂತೈಸುವವನೆಂತಲೂ ಕರೆಯಲ್ಪಟ್ಟಿದ್ದಾನೆ. ಆತನು ದೇವರೊಂದಿಗೆ ಮತ್ತು ಕ್ರಿಸ್ತನೊಂದಿಗೆ ಸೇರಿ, ಲೋಕದ ಜನರ ಮಧ್ಯದಲ್ಲಿ ದೇವರ ಕಾರ್ಯವನ್ನು ಮಾಡುತ್ತಾನೆ.

**ಪವಿತ್ರ ಆಲಯ** ಶೀಲೋವಿನಲ್ಲಿದ ಒಂದು ಪವಿತ್ರ ಗುಡಾರ. ಜನರು ಯೆಹೋವನನ್ನು ಆರಾಧಿಸುವುದಕ್ಕಾಗಿ ಇಲ್ಲಿಗೆ ಹೋಗುತ್ತಿದ್ದರು. ಜೆರುಸಲೇಮಿನಲ್ಲಿ ಯೆಹೋವನ ಆಲಯವಿದ್ದ ಕಾರಣ, ನಾವು ಎಷ್ಟೇ ದುಷ್ಕೃತ್ಯಗಳನ್ನು ಮಾಡಿದರೂ ಯೆಹೋವನು ಜೆರುಸಲೇಮನ್ನು ರಕ್ಷಿಸುತ್ತಾನೆಂದು ಹಲವರು ಭಾವಿಸಿದ್ದರು.

**ಪಸ್ಕಹಬ್ಬ** ಇಬ್ರಿಯ ಪದದ ಅರ್ಥವೇನೆಂದರೆ, ''ಬಿಟ್ಟು ಹೋಗು, ಮುಂದೆ ಹಾದುಹೋಗು'' ಅಥವಾ ''ಸಂರಕ್ಷಿಸು.'' ಯೆಹೂದ್ಯರಿಗೆ ಪ್ರಾಮುಖ್ಯವಾದ ಪರಿಶುದ್ಧ ದಿನ. ಮೋಶೆಯ ಕಾಲದಲ್ಲಿ ದೇವರು ಅವರನ್ನು ಈಜಿಪ್ಟಿನ ದಾಸತ್ವದಿಂದ ಬಿಡಿಸಿದ್ದನ್ನು ಜ್ಞಾಪಕ ಮಾಡಿಕೊಳ್ಳುವುದಕ್ಕಾಗಿ ಪ್ರತಿ ವರ್ಷ ಈ ದಿನದಲ್ಲಿ ವಿಶೇಷ ಅಡಿಗೆ ಮಾಡುತ್ತಿದ್ದರು.

**ಪಂಚಶತ್ತಮ ಹಬ್ಬ** ಯೆಹೂದ್ಯರ ಹಬ್ಬವಿದು. ಇದು ಗೋಧಿಯ ಸುಗ್ಗಿ ಹಬ್ಬ.

**ಪವಿತ್ರ ಗುಡಾರ** ಇಸ್ರೇಲ್ ಜನರು ದೇವರನ್ನು ಆರಾಧಿಸುತ್ತಿದ್ದ ವಿಶೇಷವಾದ ಸ್ಥಳ. ಇಲ್ಲಿ ಇದು ಬಹುಶಃ ಜೆರುಸಲೇಮಿನ ದೇವಾಲಯ ಎಂದು ಅರ್ಥಕೊಡುತ್ತದೆ.

**ಪವಿತ್ರ ಪರ್ವತ** ಚೆಯೋನ್, ಯಾವ ಪರ್ವತಗಳ ಮೇಲೆ ಜೆರುಸಲೇಮ್ ಕಟ್ಟಲ್ಪಟ್ಟಿದೆಯೋ ಆ ಪರ್ವ ತಗಳಲ್ಲಿ ಇದೂ ಒಂದು.

**ಪವಿತ್ರ ಪೆಟ್ಟಿಗೆ** ಒಡಂಬಡಿಕೆಯ ಪೆಟ್ಟಿಗೆ ಕಲ್ಲಿನ ಹಲಗೆಗಳ ಮೇಲೆ ಹತ್ತು ಆಜ್ಞೆಗಳನ್ನು ಬರೆದು ಅವುಗಳನ್ನು ಈ ಪೆಟ್ಟಿಗೆಯಲ್ಲಿಟ್ಟಿದ್ದರು.

**ಪಾದಪೀಠ** ಒಡಂಬಡಿಕೆಯ ಪೆಟ್ಟಿಗೆ, ಪವಿತ್ರ ಗುಡಾರ ಅಥವಾ ದೇವಾಲಯ ಎಂಬರ್ಥಗಳನ್ನು ಸಹ ಇದು ಕೊಡಬಹುದು.

**ಪಾತಾಳ** ಅಕ್ಷರಶಃ ''ಜನರು ಹಿಂತಿರುಗದ ಸ್ಥಳ'' ಅಥವಾ ಸಮಾಧಿ.

**ಪೆರೆಚ್** ಈ ಹೆಸರಿನ ಅರ್ಥ: ''ಮುನ್ನುಗ್ಗಿ ಬಾ.''

**ಪೇತ್ರ** ಅಂದರೆ ''ಬಂಡೆ.'' ಇದು ಪದ ಬಳಕೆಯು ''ಶ್ಲೇಷ್ಟೆಯಾಗಿದೆ.''

**ಪೆರೆಚುಜ್ಜಾ** ''ಉಜ್ಜನಿಗೆ ದಂಡನೆ''ಎಂದು ಹೀಬ್ರೂವಿನಲ್ಲಿ ಹೇಳುತ್ತಾರೆ.

**ಪೆನೀಯೇಲ್** ಅಥವಾ ಪೆನೂಯೇಲ್ ಈ ಹೆಸರಿನ ಎರಡು ಉಚ್ಚಾರಣೆಗಳೂ ಒಂದೇ ಅರ್ಥವನ್ನು ಕೊಡುತ್ತದೆ: ''ದೇವರ ಮುಖ.''

**ಪೆಲೆಗ್** ಈ ಹೆಸರಿನ ಅರ್ಥ ''ವಿಂಗಡಣೆ.'' ''ವಿಭಾಗ.''

**ಪ್ರವಾದಿನಿ** ದೇವರ ಸಂದೇಶವನ್ನು ತಿಳಿಸುವ ಸ್ತ್ರೀ.

**ಪಿಲಾತನು** ಪೊಂತ್ಯ ಪಿಲಾತನು. ಜುದೇಯವನ್ನು ಕ್ರಿ.ಶ. 26ರಿಂದ 36ರವರೆಗೆ ಆಳಿದ ರೋಮಿನ ರಾಜ್ಯಪಾಲ.

## ಫ

**ಫರಿಸಾಯರು** ಯೆಹೂದ್ಯ ಕಟ್ಟಳೆಗಳನ್ನು ಮತ್ತು ಪದ್ಧತಿಗಳನ್ನು ಶ್ರದ್ಧೆಯಿಂದ ಅನುಸರಿಸುವವರು ಎಂದು ಹೇಳಿಕೊಳ್ಳುವ ಯೆಹೂದ್ಯರ ಧಾರ್ಮಿಕ ಗುಂಪಿಗೆ ಸೇರಿದವರು.

**ಫರೋಹ** ಈಜಿಪ್ಟಿನ ರಾಜ.

**ಫರಿಸಾಯರು** ಯೆಹೂದ್ಯ ಕಟ್ಟಳೆಗಳನ್ನು ಮತ್ತು ಪದ್ಧತಿಗಳನ್ನು ಶ್ರದ್ಧೆಯಿಂದ ಅನುಸರಿಸುವವರು ಎಂದು ಹೇಳಿಕೊಳ್ಳುವ ಯೆಹೂದ್ಯರ ಧಾರ್ಮಿಕ ಗುಂಪಿಗೆ ಸೇರಿದವರು.

## ಬ

**ಬಂಡೆ** ದೇವರ ಹೆಸರು. ಆತನು ಕೋಟೆಯಂತಿದ್ದಾನೆ ಅಥವಾ ಬಲವಾದ ಸುರಕ್ಷಿತ ಸ್ಥಳದಂತಿದ್ದಾನೆ ಎಂಬುದನ್ನು ಇದು ತೋರಿಸುತ್ತದೆ.

**ಬಟ್ಟಲು** ಅಥವಾ ''ಕೆತ್ತಿದ ಪಾತ್ರೆ'' ಉಳಿಯಿಂದ ಕೆತ್ತಿ ಮಾಡಿದ ಪಾತ್ರೆ. ದ್ರಾಕ್ಷಾರಸವನ್ನು ಇದರಲ್ಲಿ ಮಿಶ್ರಣ ಮಾಡಿದ ನಂತರ ಬಟ್ಟಲುಗಳಿಗೆ ಹಾಕುತ್ತಿದ್ದರು. ಚಂದ್ರಬಿಂಬದಂತೆ ಪಾತ್ರೆ ಅಥವಾ ಅರ್ಧ ಚಂದ್ರಾಕಾರದ ಪಾತ್ರೆ'' ಎಂಬರ್ಥವನ್ನೂ ಇದು ಕೊಡಬಲ್ಲದು.

**ಬರಬ್ಬ** ಕೆಲವು ಗ್ರೀಕ್ ಪ್ರತಿಗಳಲ್ಲಿ ''ಏಸು ಬರಬ್ಬ'' ಎಂದಿದೆ.

**ಬಾಬಿಲೋನ್** ಇದರರ್ಥ ''ತಾರುಮಾರು.''

**ಬಾಳ್** ಈ ಸುಳ್ಳು ದೇವರು ಮಳೆ ಮತ್ತು ಬಿರುಗಾಳಿಯನ್ನು ತರುವನೆಂದು ಮತ್ತು ಒಳ್ಳೆಯ ಬೆಳೆ ಬೆಳೆಯುವಂತೆ ಮಾಡುವನೆಂದು ಕಾನಾನ್ಯರು ನಂಬಿದ್ದರು.

**ಬಾಳ್‌ಬೆರೀತ್** ಈಹೆಸರಿನ ಅರ್ಥ ''ಒಡಂಬಡಿಕೆಯ ಪ್ರಭು'' ಎಂದು ಆಗುತ್ತದೆ.

**ಬಾಳ್‌ಪೆರಾಚೀಮ್** ಹೀಬ್ರೂ ಭಾಷಯಲ್ಲಿ ಇದರರ್ಥ: ''ಪ್ರಭುವು ಒಡೆದು ನುಗ್ಗಿದ.''

**ಬೀರ್‌ಲಹೈರೋಯಿ** ಇದರರ್ಥ: ''ನನ್ನನ್ನು ನೋಡುವ ಜೀವಸ್ವರೂಪನ ಬಾವಿ.''

**ಬೆನಮ್ಮಿ** ಹೀಬ್ರೂ ಭಾಷೆಯಲ್ಲಿ ಈ ಪದದ ಅರ್ಥ: ''ನನ್ನ ತಂದೆಯ ಮಗನು'' ಅಥವಾ ''ನನ್ನ ಜನರ ಮಗನು.''

**ಬೆನೋನಿ** ಈ ಹೆಸರಿನ ಅರ್ಥ: ''ನನ್ನ ಸಂಕಟದ ಮಗನು.''

**ಬೆನ್ಯಾಮೀನ್** ಈ ಹೆಸರಿನ ಅರ್ಥ: ''ನನ್ನ ಪ್ರಿಯ ಮಗ.''

**ಬೆದರುಗಂಬ** ಹೊಲಗದ್ದೆಗಳಲ್ಲಿ ಪಕ್ಷಿಗಳನ್ನು ಹೆದರಿಸುವ ವಿಚಿತ್ರಾಕಾರದ ಮರದ ಕಂಬ.

**ಬೇರ್ಷೆಬ** ಇದರರ್ಥ ''ಪ್ರಮಾಣದ ಬಾವಿ.''

**ಬೇತೇಲ್** ಈ ಹೆಸರಿನ ಅರ್ಥ: ''ದೇವರ ಮನೆ.''

**ಬೇಲ್** ಮೆರೋದಾಕ್ ದೇವತೆಯ ಇನ್ನೊಂದು ಹೆಸರು.

**ಬೆಳ್ಳಿ ನಾಣ್ಯಗಳು** ಮೂಲಭಾಷೆಯಲ್ಲಿ ದಿನಾರಿ. ರೋಮಾ ಸಾಮ್ರಾಜ್ಯದ ಬೆಳ್ಳಿ ನಾಣ್ಯ. ಒಂದು ನಾಣ್ಯ ಅಂದರೆ ರೋಮನ್ನರ ಒಂದು 'ದೆನರಿಯಸ್.' ಒಂದು ದಿನದ ಕೆಲಸಕ್ಕೆ ದೊರಕುವ ಸರಾಸರಿ ಸಂಬಳ ಇದಾಗಿತ್ತು.

**ಬೇತಾಳಿಕಳು** ಪ್ರೇತಗಳಿಂದ ತಿಳಿದುಕೊಂಡು ಸಮಾಚಾರಗಳನ್ನು ಇತರರಿಗೆ ತಿಳಿಸುವವಳು.

**ಬೆಹೇಮೋತ್** ಕೆಲವರು ಇದನ್ನು ನೀರಾನೆಯೆಂತಲೂ ಬೃಹದಾಕಾರದ ಮೃಗವೆಂತಲೂ ಭಾವಿಸುತ್ತಾರೆ.

**ಬೋಕೀಮ್** ಇದರ ರ್ಥ ''ಜನರು ಅಳುವುದು.''

## ಭ

**ಭರಣಿ** ಮೂಲ ಚಂದ್ರಕಾಂತಶಿಲೆಯ ಭರಣಿ.

## ಮ

**ಮನ್ನ** ಇಸ್ರೇಲರು ಅರಣ್ಯದಲ್ಲಿ ನಲವತ್ತು ವರ್ಷಗಳ ಕಾಲ ಅಲೆಮಾರಿಗಳಾಗಿದ್ದಾಗ, ದೇವರು ಅವರಿಗಾಗಿ ಕಳುಹಿಸಿದ ವಿಶೇಷವಾದ ಆಹಾರ. ''ಏನದು'' ಎಂದು ಅರ್ಥ ಕೊಡುವ ಇಬ್ರಿಯ ಪದಗಳಂತೆ ಈ ಪದವು ಇರುತ್ತದೆ.

**ಮನುಷ್ಯ** ಹೀಬ್ರೂ ಭಾಷೆಯಲ್ಲಿ ಈ ಪದವು ''ಮಾನವ,'' ''ಜನರು,'' ಅಥವಾ ''ಆದಾಮ'' ಎಂಬ ಹೆಸರಿನ ಅರ್ಥವನ್ನು ನೀಡುತ್ತದೆ. ಈ ಪದವು ''ಭೂಮಿ'' ಅಥವಾ ''ಕೆಂಪು ಮಣ್ಣು'' ಎಂಬ ಅರ್ಥವನ್ನು ಕೊಡುವ ಪದದಂತಿದೆ.

**ಮಹಾಯಾಜಕ** ಪ್ರಾಮುಖ್ಯರಾದ ಯೆಹೂದ್ಯ ಯಾಜಕರು.

**ಮನುಷ್ಯಕುಮಾರನು** ಯೇಸು. ದಾನಿಯೇಲ 7:13-14 ರಲ್ಲಿ ದೇವರು ತನ್ನ ಜನರನ್ನು ರಕ್ಷಿಸಲು ಆರಿಸಿಕೊಂಡ ಮೆಸ್ಸೀಯನಿಗೆ ಈ ಹೆಸರು ಕೊಡ ಲಾಗಿದೆ.

**ಮನಸ್ಸೆ** ಯೆಹೂದದ ಒಬ್ಬ ದುಷ್ಟ ರಾಜ. ಅವನು ಅನೇಕ ಸುಳ್ಳು ದೇವರುಗಳನ್ನು ಪೂಜಿಸಿದನು.

**ಮಸ್ಸಾ** ''ದಂಗೆ ಏಳು'' ಎಂಬುದು ಇದರರ್ಥ.

**ಮಹನಯಿಮ್** ಇದರ ಅರ್ಥ: ''ಎರಡು ಪಾಳೆಯಗಳು.''

**ಮಲ್ಕಾಮ್** ಅಮ್ಮೋನ್ಯರ ದೇವರು.

**ಮಹಾಪವಿತ್ರ ಸ್ಥಳ** ''ದೇವಾಲಯದ ಅಥವಾ ಪರಿಶುದ್ಧ ಗುಡಾರದ ಅತ್ಯಂತ ಮುಖ್ಯವಾದ ಭಾಗ. ಈ ಕೋಣೆಯಲ್ಲಿ ಒಡಂಬಡಿಕೆಯ ಪೆಟ್ಟಿಗೆಯಿತ್ತು ಮತ್ತು ಕೆರೂಬಿದೂತರಿದ್ದರು. ದೇವರು ಇಸ್ರೇಲರ ರಾಜನಾಗಿ ಕುಳಿತುಕೊಂಡ ಸಿಂಹಾಸನದಂತೆ ಇವುಗಳಿದ್ದವು.

**ಮಹನಹಿಮ್ ನೃತ್ಯ** ಅಥವಾ ''ಜಯದ ನೃತ್ಯ.''

**ಮಾರಾ** ಕಹಿ, ದುಃಖಕರ ಎಂದರ್ಥ.

**ಮೆಫೀಬೋಶೆತ್** ಇವನು ಯೋನಾತಾನನ ಮಗನಲ್ಲ. ಅದೇ ಹೆಸರಿನ ಬೇರೆಯವನು.

**ಮೆಂಫೀಸ್ ಮತ್ತು ತಪನೇಸ್** ಇವು ಈಜಿಪ್ಟಿನ ಎರಡು ಪಟ್ಟಣಗಳು.

**ಮಿಚ್ರಯಿಮ್** ಈಜಿಪ್ಟಿನ ಮತ್ತೊಂದು ಹೆಸರು.

**ಮಿದ್ಯಾನ್ಯರು** ಗ್ರೀಕ್ ಬಾಷಾಂತರಗಳಲ್ಲಿ ''ಮಿದ್ಯಾನ್ಯರು'' ಎಂದು ಇದೆ. ಹೀಬ್ರೂವಿನಲ್ಲಿ ''ಮಾವೋನ್ಯರು'' ಎಂದು ಇದೆ.

**ಮಿಲ್ಲೋ** ಜೆರುಸಲೇಮಿನ ದೇವಾಲಯದ ಆಗ್ನೇಯ ದಿಕ್ಕಿನ ಪ್ರದೇಶದಲ್ಲಿದ್ದ ಎತ್ತರವಾದ ವೇದಿಕೆಯೇ ಬಹುಶಃ, ಚೀಯೋನ್ ಪುರಾತನ ಕೋಟೆಯ ಒಂದು ಶಕ್ತಿಯುತವಾದ ಸ್ಥಳ. ನಗರದ ಭದ್ರವಾದ ಭಾಗ. ಇದು ಪಟ್ಟಣದಲ್ಲಿಯೇ ಅಥವಾ ಪಟ್ಟಣದ ಸಮೀಪ ಇದ್ದಿರಬಹುದು.

**ಮಿಸ್ಸಾರ್ ಬೆಟ್ಟ** ಅಥವಾ ಶಿಖರ.

**ಮಿಚ್ಪಾ** ಇದರರ್ಥ: ''ನೋಡಲು ಯೋಗ್ಯವಾದ ಸ್ಥಳ.''

**ಮೆರೀಬಾ** ''ವಿಚಾರಣೆ'' ''ಶೋಧನೆ'' ಅಥವಾ ''ಪರೀಕ್ಷೆ'' ಎಂಬುದು ಇದರರ್ಥ.

**ಮೆರೋದಾಕ್** ಬಾಬಿಲೋನಿಯರ ಪ್ರಮುಖ ದೇವತೆ.

**ಮೆಗೂನ್ಯರು** ಹೀಬ್ರೂವಿನಲ್ಲಿ ''ಅಮ್ಮೋನಿಯರು.''

**ಮೊದಲನೆ ತಿಂಗಳು** ನಿಶಾನ್; ಯೆಹೂದ್ಯರ ಕ್ಯಾಲೆಂಡರಿನ ಪ್ರಕಾರ ಮೊದಲನೆ ತಿಂಗಳು. ಇದು ಮಾರ್ಚ್-ಎಪ್ರಿಲ್ ತಿಂಗಳಲ್ಲಿ ಬರುತ್ತದೆ.

**ಮೋವಾಬ್** ಈ ಪದದ ಅರ್ಥ: ''ತಂದೆಯಿಂದ.''

**ಮೂವತ್ತು ಬೆಳ್ಳಿ ನಾಣ್ಯಗಳು** ಹೊಸ ಗುಲಾಮನೊಬ್ಬನ ಬೆಲೆ.

**ಮೂವತ್ತು ಮಂದಿ ಶೂರರು** ಪ್ರಖ್ಯಾತರಾಗಿದ್ದ ಹಾಗೂ ಬಹಳ ಧೈರ್ಯಶಾಲಿಗಳಾಗಿದ್ದ ಈ ಸೈನಿಕರು ದಾವೀದನ ಗುಂಪಿನವರು.

## ಯ

**ಯಜ್ಞ** ದೇವರಿಗೆ ಕಾಣಿಕೆ, ಸಾಮಾನ್ಯವಾಗಿ ಒಂದು ವಿಶೇಷ ಪ್ರಾಣಿ ಯನ್ನು ಕೊಂದು ಯಜ್ಞವೇದಿಕೆಯ ಮೇಲೆ ಸುಡುತ್ತಿದ್ದರು.

**ಯಗರ್ ಸಾಹದೂತ್** ಅರ್ಯಮೇಯಿಕ್ ಭಾಷೆಯ ಅರ್ಥ: ''ಒಡಂಬಡಿಕೆಯ ಕಲ್ಲಿನ ಗುಡ್ಡೆ.''

**ಯಜ್ಞವೇದಿಕೆಯ ಕೊಂಬುಗಳನ್ನು ಹಿಡಿದುಕೊಂಡನು** ಇದು ಅವನು ಕರುಣೆಯನ್ನು ಕೇಳುವಂತೆ ಸೂಚಿಸುತ್ತದೆ. ಒಬ್ಬ ವ್ಯಕ್ತಿಯು ತನ್ನ ಅಪರಾಧದ ಬಗ್ಗೆ ಮುಗ್ಧನಾಗಿದ್ದರೆ, ಅವನು ಪವಿತ್ರವಾದ ಸ್ಥಳಕ್ಕೆ ಓಡಿ ಹೋದರೆ, ಅವನು ಯಜ್ಞವೇದಿಕೆಯ ಮೂಲೆಗಳನ್ನು ಹಿಡಿದುಕೊಂಡರೆ, ಆಗ ಅವನನ್ನು ದಂಡಿಸಬಾರದು.

**ಯಾಹು** ''ಯೆಹೋವ'' ಎಂಬ ಹೆಸರಿನ ಮತ್ತೊಂದು ರೂಪ.

**ಯಾಕೋಬ** ಹೀಬ್ರೂ ಭಾಷೆಯಲ್ಲಿ ಈ ಪದದ ಅರ್ಥ: ''ಹಿಮ್ಮಡಿ.'' ''ಹಿಂಬಾಲಿಸುವವನು'' ಅಥವಾ ''ಮೋಸಗಾರ.''

**ಯಾಕೋಬ್** ಇಸ್ರೇಲಿನ ಮತ್ತೊಂದು ಹೆಸರು. ನೋಡಿ ಆದಿಕಾಂಡ 32 22-28.

**ಯಾಷಾರ್ ಗ್ರಂಥ** ಇಸ್ರೇಲರ ಯುದ್ಧಗಳನ್ನು ಕುರಿತಂತೆ ಕೊನೆಯ ಪ್ರಾಚೀನ ಗ್ರಂಥ.

**ಯೆಹೂದ** ಈ ಪದದ ಅರ್ಥ: ''ಆತನಿಗೆ ಸ್ತೋತ್ರ.''

**ಯೆಹೋವಾಹಾಜ್** ಅಹಜ್ಯ ಎಂದು ಸಹ ಕರೆಯುತ್ತಿದ್ದರು.

**ಯೆಹೂದ್ಯರ ಹಬ್ಬ** ದೇವರು ಈಜಿಪ್ಟಿನಲ್ಲಿ ಯೆಹೂದ್ಯರನ್ನು ಸಂರಕ್ಷಿಸಿದುದರ ಸ್ಮಾರಕವಾಗಿ ಆಚರಿಸುವ ಒಂದು ಹಬ್ಬ.

**ಯೆದೀದ್ಯ** ಈ ಹೆಸರಿನ ಅರ್ಥವೆಂದರೆ, ''ಯೆಹೋವನಿಂದ ಪ್ರೀತಿಸಲ್ಪಟ್ಟವನು.''

**ಯೆಶೂರೂನ** ಇದು ಇಸ್ರೇಲಿನ ಮತ್ತೊಂದು ಹೆಸರು. ಇದರರ್ಥ: ''ಒಳ್ಳೆಯ'' ಅಥವಾ ''ಯಥಾರ್ಥ.''

**ಯೋವಾಬ್ ಮತ್ತು ಅಬೀಷೈ** ಅಬ್ನೇರನಿಂದ ಕೊಲ್ಲಲ್ಪಟ್ಟ ಅಸಾಹೇಲನ ಸೋದರರು.

**ಯೆರುಬ್ಬಾಳ** ಇದು ಹೀಬ್ರೂ ಶಬ್ದಗಳಂತೆ ಇದೆ. ಇದರ ಅರ್ಥ ''ಬಾಳನು ವಾದಿಸಲಿ'' ಎಂದು, ಆ ಕ್ರಿಯಾ ಪದವನ್ನು ''ಒಂದು ಪಕ್ಷವಹಿಸು'' ''ರಕ್ಷಿಸು'' ಎಂದು ಅರ್ಥೈಸಲಾಗಿದೆ.

**ಯೆಹೋವನ ಆಲಯ** ಜೆರುಸಲೇಮಿನಲ್ಲಿ ದೇವಾಲಯವಿದ್ದ ಕಾರಣ ದೇವರು ಜೆರುಸಲೇಮನ್ನು ರಕ್ಷಿಸುತ್ತಾನೆ ಎಂದು ಅನೇಕರು ತಿಳಿದುಕೊಂಡಿದ್ದರು. ಜನರು ಎಷ್ಟೇ ಕೆಟ್ಟವರಾಗಿದ್ದರೂ ಸರಿ, ದೇವರು ಜೆರುಸಲೇಮನ್ನು ಕಾಪಾಡುತ್ತಾನೆ ಎಂಬುದು ಅವರ ಭಾವನೆಯಾಗಿತ್ತು.

**ಯೆಹೋವಯೀರೆ** ಇದರರ್ಥ, ''ಯೆಹೋವನು ಒದಗಿಸುತ್ತಾನೆ.''

**ಯೋಸೇಫ** ಇದರರ್ಥ: ''ಸೇರಿಸು'' ''ಸಂಗ್ರಹಿಸು'' ಅಥವಾ ''ಒಟ್ಟುಗೂಡಿಸು.'' ಯೋಸೇಫನ ಕುಟುಂಬ, ಇಸ್ರೇಲಿನ ಜನರು.

## ರ

**ರಬ್ಬ** ಅಮ್ಮೋನಿಯರ ರಾಜಧಾನಿ.

**ರಹಬ** ಅಥವಾ ಮಹಾಸಮುದ್ರ ಪ್ರಾಣಿ. ಯೆಶಾಯ 27:1 ನ್ನು ನೋಡಿರಿ.

**ರಹಬ** ಪುರಾಣಕಥೆಯಲ್ಲಿ ಸಮುದ್ರ ಪ್ರಾಣಿಗೆ ರಹಬ ಎಂದು ಕರೆಯಲಾಗಿದೆ. ಯಾವುದೇ ಕೆಟ್ಟದ್ದಕ್ಕಾಗಲೀ ರಹಬ ಸಂಕೇತವಾಗಿದೆಯೆಂದು ಜನರು ಭಾವಿಸಿಕೊಂಡಿದ್ದರು.

**ರಬ್ಬಾ ಅಮ್ಮೋನ್** ಅಮ್ಮೋನ್ಯರ ರಾಜಧಾನಿ.

**ರೆಗೂವೇಲ** ಅವನಿಗೆ ಇತ್ರೋವ ಎಂಬ ಹೆಸರೂ ಇದೆ.

**ರಾಮತ್‌ಲೆಹೀ** ಇದರರ್ಥ ''ದವಡೆ ಎಲುಬಿನ ದಿಬ್ಬ.''

**ರೂಬೇನ್** ಈ ಪದದ ಅರ್ಥ: ''ನೋಡು, ಮಗನು!''

## ಲ

**ಲಿವ್ಯಾತಾನ** ಇದು ಹೀಬ್ರೂ ಹೆಸರು, ಇದು ಯಾವ ಪ್ರಾಣಿ ಎಂಬುದು ಸರಿಯಾಗಿ ಗೊತ್ತಿಲ್ಲ. ಕೆಲವರು ಇದನ್ನು ಮೊಸಳೆ ಎಂದು ಭಾವಿಸುತ್ತಾರೆ. ಇನ್ನು ಕೆಲವರು ಇದನ್ನು ಮಹಾ ಸಮುದ್ರಪ್ರಾಣಿ ಎಂದು ಭಾವಿಸುತ್ತಾರೆ. ಇದರ ಮೂಲಕವಾಗಿ ಮಾಂತ್ರಿಕರು ಸೂರ್ಯಗ್ರಹಣ ವನ್ನು ಉಂಟುಮಾಡಬಲ್ಲರೆಂದು ಜನರು ಭಾವಿಸಿ ಕೊಂಡಿದ್ದರು.

**ಲೇವಿಯ** ಲೇವಿ ಕುಲದವನು. ಈ ಕುಲದವರು ದೇವಾಲಯದಲ್ಲಿ ಯಾಜಕರಿಗೆ ಸಹಾಯಕರಾಗಿದ್ದರು.

**ಲಿಪಿಗಾರರು** ಆ ಕಾಲದ ಲಿಪಿಗಾರರು ವಿವಿಧ ಬರಹಗಳನ್ನು ನಕಲು ಮಾಡುತ್ತಿದ್ದರು. ಅನಂತರ ಹಳೆ ಒಡಂಬಡಿಕೆ ಎಂದು ಕರೆಯಲ್ಪಟ್ಟ ಪುಸ್ತಕಗಳನ್ನು ಸಹ ಅವರು ನಕಲು ಮಾಡುತ್ತಿದ್ದರು.

**ಲೇವಿ** ಈ ಪದದ ಅರ್ಥ: ''ಜೊತೆಗೂಡಿ,'' ''ಒಂದಾಗಿರು'' ಅಥವಾ ''ಸಮೀಪಸ್ಥನಾಗು.''

**ಲೇವಿಯರು** ಲೇವಿಕುಲದ ಜನರು. ಈ ಲೇವಿಯರು ದೇವಾಲಯದಲ್ಲಿ ಯಾಜಕರಿಗೆ ಸಹಾಯ ಮಾಡುತ್ತಿದ್ದರು ಮತ್ತು ಪ್ರಜಾ ಸರ್ಕಾರದ ಪರವಾಗಿ ಕೆಲಸ ಮಾಡುತ್ತಿದ್ದರು.

**ಲೈರ್** ಹಾರ್ಪ್ ವಾದ್ಯದಂತೆ ಹಲವಾರು ತಂತಿಗಳಿರುವ ವಾದ್ಯ.

**ಲೊ ಡೆಬಾರ್** ಇದರರ್ಥ ''ಶೂನ್ಯ.''

## ವ

**ವರ್ಷಾಂತ್ಯ** ಅಂದರೆ ಚಳಿಗಾಲದಲ್ಲಿ.

**ವಾರಗಳ ಹಬ್ಬ** ''ಪಂಚಾಶತ್ತಮ'' ಅಥವಾ ''ಷಾಹುಹೋತ್'' ಎಂಬುದಾಗಿಯೂ ಕರೆಯ ಲ್ಪಟ್ಟಿದೆ.

**ವೇದಿಕೆಯ ಒಲೆ** ಯಜ್ಞವನ್ನು ಸುಡುವ ಸ್ಥಳ.

**ವಿಶೇಷ ಸ್ಥಳ** ಅಕ್ಷರಶಃ ''ಪರಿಶುದ್ಧ ಸ್ಥಳಕ್ಕೆ'' ಅಂದರೆ ಸಾಂಪ್ರದಾಯ ಕವಾಗಿ ಶುದ್ಧಪಡಿಸಿದ ಅಥವಾ ಶುಚಿಪಡಿಸಿದ ಎಂದರ್ಥ.

**ವಿಶೇಷ ಸಮಯಗಳು** ಅಥವಾ''ವಿಶೇಷ ಕೂಟ ಗಳು'' ಯೆಹೂದ್ಯರ ಅನೇಕ ರಜಾದಿನಗಳು ಮತ್ತು ವಿಶೇಷ ಕೂಟಗಳು ಅಮಾವಾಸ್ಯೆ ಮತ್ತು ಪೂರ್ಣಿಮೆಗಳ ಕಾಲದಲ್ಲಿ ಆರಂಭವಾಗುತ್ತದೆ.

**ವಿಶೇಷ ಬಗೆಯ ಕಾಣಿಕೆ** ಇದು ಸಾಮಾನ್ಯವಾಗಿ ಯುದ್ದದಲ್ಲಿ ತೆಗೆದು ಕೊಂಡ ವಸ್ತುಗಳನ್ನು ಸೂಚಿಸುತ್ತದೆ. ಆ ವಸ್ತುಗಳು ಯೆಹೋವನಿಗೆ ಮಾತ್ರ ಸೇರಿದವುಗಳಾದ್ದರಿಂದ, ಅವುಗಳನ್ನು ಬೇರೆ ಯಾವುದಕ್ಕೂ ಉಪ ಯೋಗಿಸಲು ಸಾಧ್ಯವಿರಲಿಲ್ಲ.

**ವಿಶ್ರಾಂತಿಯ ಹಬ್ಬ** ಬಹುಶಃ ಪಸ್ಕ ಹಬ್ಬ.

**ವಿಶೇಷ ಪ್ರಮಾಣ** ದೇವರಿಗೆ ಮಾಡುವ ವಿಶೇಷ ಪ್ರಮಾಣ.

**ವಿಶ್ರಾಂತಿಯ ವಿಶೇಷದಿನಗಳನ್ನು** ಅಥವಾ ''ಸಬ್ಬತ್ ದಿನಗಳು.'' ಇದು ಶನಿವಾರವಾಗಿರ ಬಹುದು ಅಥವಾ ಜನರು ಕೆಲಸ ಮಾಡದ ವಿಶೇಷ ದಿನಗಳಾಗಿದ್ದಿರ ಬಹುದು.

## ಸ

**ಸಂಕಟದ ಪಾತ್ರೆ** ತನಗೆ ಸಂಭವಿಸಲಿರುವ ಕೆಟ್ಟ ಸಂಗತಿಗಳನ್ನು ಕುರಿತು ಹೇಳುತ್ತಿದ್ದಾನೆ. ಕಹಿಯಾದ ಪಾನೀಯವನ್ನು ಒಂದು ಲೋಟ ಪೂರ್ತಿ ಕುಡಿಯುವುದು ಎಷ್ಟು ಕಷ್ಟವೊ ಈ ಸಂಗತಿಗಳನ್ನು ಒಪ್ಪಿಕೊಳ್ಳುವುದೂ ಅಷ್ಟೇ ಕಷ್ಟಕರ.

**ಸತ್ತವರ ಆತ್ಮದೊಂದಿಗೆ ಮಾತನಾಡುವವರು** ಊರೀಮ್ ಮತ್ತು ತುಮ್ಮೀಮ್ ಇವುಗಳ ಮೂಲಕವಾಗಿ ಜನರು ದೇವರಿಂದ ಉತ್ತರಗಳನ್ನು ಪಡೆದುಕೊಳ್ಳುತ್ತಿದ್ದರು. ಅದು ಹೇಗೆಂಬುದು ಸ್ಪಷ್ಟವಾಗಿ ತಿಳಿದಿಲ್ಲ. ನೋಡಿ ಅರಣ್ಯಕಾಂಡ 27:20-22

**ಸದ್ದುಕಾಯರು** ಯೆಹೂದ್ಯರ ಪ್ರಾಮುಖ್ಯ ಧಾರ್ಮಿಕ ಗುಂಪು. ಅವರು ಹಳೆ ಒಡಂಬಡಿಕೆಯ ಮೊದಲಿನ ಐದು ಪುಸ್ತಕಗಳನ್ನು ಮಾತ್ರ ಅಂಗೀಕರಿಸಿದವರಾಗಿದ್ದರು.

**ಸಜ್ಜ** ಯಜ್ಞವೇದಿಕೆಯ ಸುತ್ತಲೂ ಯಾಜಕರು ನಡೆದು ಹೋಗಲು ಇದ್ದ ಸ್ಥಳ.

**ಸಂರಕ್ಷಕ** ಸತ್ತುಹೋದ ಸಂಬಂಧಿಕನ ಕುಟುಂಬದ ಬಗ್ಗೆ ಚಿಂತಿಸಿ ಸಂರಕ್ಷಿಸುವವನು. ಬಹುಮಟ್ಟಿಗೆ, ಈ ವ್ಯಕ್ತಿಯು ತನ್ನ ಬಡ ಸಂಬಂಧಿಕರನ್ನು ದಾಸತ್ವದಿಂದ ಬಿಡಿಸಿ ಕರೆದುಕೊಂಡು ಬರುತ್ತಿದ್ದನು.

**ಸಬ್ಬತ್** ಶನಿವಾರ. ಇದು ಯೆಹೂದ್ಯರಿಗೆ ವಿಶೇಷವಾದ ವಿಶ್ರಾಂತಿಯ ಮತ್ತು ಆರಾಧನೆಯ ದಿನ.

**ಸದ್ದುಕಾಯರು** ಯೆಹೂದ್ಯರ ಒಂದು ಮುಖ್ಯ ಧಾರ್ಮಿಕ ಪಂಗಡದವರು. ಅವರು ಹಳೆ ಒಡಂಬಡಿಕೆಯ ಮೊದಲನೆಯ ಐದು ಪುಸ್ತಕಗಳನ್ನು ಮಾತ್ರ ಸ್ವೀಕರಿಸಿಕೊಂಡಿದ್ದರು. ಜನರು ಮರಣಾನಂತರ ಎದ್ದು ಬರುವದಿಲ್ಲವೆಂದು ಅವರು ನಂಬಿದ್ದರು.

**ಸಾಫ್ನತ್ಪನ್ನೇಹ** ಈಜಿಪ್ಟಿನ ಈ ಹೆಸರು ಬಹುಶಃ ''ಜೀವ ಪೋಷಕ'' ಎಂಬ ಅರ್ಥವನ್ನು ಕೊಡುತ್ತದೆ. ಹೀಬ್ರೂ ಭಾಷೆಯಲ್ಲಿ ಈ ಪದದ ಅರ್ಥ: ''ರಹಸ್ಯ ಸಂಗತಿಗಳ ವಿವರಣೆಗಾರ.''

**ಸಾರಯ** ಬಹುಶಃ ಅರಮೇಯಿಕ್ ಭಾಷೆಯಲ್ಲಿ ಇದರರ್ಥ ''ರಾಜ ಕುಮಾರಿ.''

**ಸಾರಾ** ಹೀಬ್ರೂ ಭಾಷೆಯಲ್ಲಿ ಇದರರ್ಥ ''ರಾಜ ಕುಮಾರಿ.''

**ಸಾಲೇಮ್** ಜೆರುಸಲೇಮಿನ ಮತ್ತೊಂದು ಹೆಸರು. ಈ ಹೆಸರಿನ ಅರ್ಥ, ''ಶಾಂತಿ.''

**ಸಾಫ್ರನ್** ಒಂದು ಬಗೆಯ ಹಳದಿ ಹೂವು. ಪರಿಮಳಕ್ಕಾಗಿ ಇದನ್ನು ಉಪಯೋಗಿಸುತ್ತಿದ್ದರು.

**ಸ್ಮಾರಕಸ್ತಂಭ** ಜನರು ವಿಶೇಷವಾದದ್ದನ್ನು ನೆನಪು ಮಾಡಿಕೊಳ್ಳಲು ಸಹಾಯಕವಾಗುವಂತೆ ಕಲ್ಲುಗಳನ್ನು ನಿಲ್ಲಿಸುತ್ತಿದ್ದರು. ಪೂರ್ವಕಾಲದ ಇಸ್ರೇಲಿನಲ್ಲಿ ಜನರು ಆಗಾಗ್ಗೆ ಸುಳ್ಳು ದೇವತೆಗಳ ಆರಾಧನೆಗಾಗಿ ಕಲ್ಲುಗಳನ್ನು ವಿಶೇಷ ಸ್ಥಳಗಳಲ್ಲಿ ನಿಲ್ಲಿಸುತ್ತಿದ್ದರು.

**ಸ್ಮಾರಕಕಲ್ಲು** ಜನರು ವಿಶೇಷವಾದದ್ದನ್ನು ನೆನಪು ಮಾಡಿಕೊಳ್ಳಲು ನಿಲ್ಲಿಸುತ್ತಿದ್ದ ಕಲ್ಲು, ಪ್ರಾಚೀನ ಇಸ್ರೇಲ್‌ನಲ್ಲಿ ಸುಳ್ಳುದೇವತೆಗಳ ಪೂಜೆಗಾಗಿ ಈ ವಿಶೇಷ ಸ್ಥಳಗಳಲ್ಲಿ ಕಲ್ಲುಗಳನ್ನು ನಿಲ್ಲಿಸುತ್ತಿದ್ದರು.

**ಸ್ನಾನಿಕ ಯೋಹಾನ.** ಇವನು ಕ್ರಿಸ್ತನ ಬರುವಿಕೆಯ ಬಗ್ಗೆ ಜನರಿಗೆ ಬೋಧಿಸಿದನು.

**ಸೈತಾನನು** ಸೈತಾನನು ಒಬ್ಬ ದೇವದೂತನು. ಇವನು ಮನುಷ್ಯರ ವೈರಿ. ಇವನು ಮನುಷ್ಯರನ್ನು ಶೋಧನೆಗೆ ಗುರಿಪಡಿಸಿ, ದೇವರ ಮುಂದೆ ಅವರ ಮೇಲೆ ಅಪವಾದ ಹೊರಿಸುತ್ತಾನೆ.

**ಸ್ವಂತ ಸ್ವಾಸ್ಥ್ಯ** ಇಸ್ರೇಲಿನಲ್ಲಿ ಭೂಮಿಯು ಕುಟುಂಬಕ್ಕೆ ಅಥವಾ ಕುಲಕ್ಕೆ ಸೇರಿದ್ದಾಗಿದೆ. ಒಬ್ಬನು ತನ್ನ ಭೂಮಿಯನ್ನು ಮಾರಿದರೂ ಜ್ಯೂಬಿಲಿಯಲ್ಲಿ ಭೂಮಿಯು ಅದು ಮೊದಲು ಯಾವ ಕುಟುಂಬಕ್ಕೆ ಅಥವಾ ಕುಲಕ್ಕೆ ಸೇರಿತ್ತೋ ಅವರದೇ ಆಗುತ್ತಿತ್ತು.

**ಸಿಮೆಯೋನ್** ಈ ಪದದ ಅರ್ಥ: ''ಆತನು ಕೇಳುತ್ತಾನೆ.''

**ಸಿಯೋನ್** ದೇವಮಕ್ಕಳ ಪಟ್ಟಣವಾದ ಜೆರುಸಲೇಮಿನ ಮತ್ತೊಂದು ಹೆಸರು.

**ಸಿರ್ಯೋನ್ ಪರ್ವತ** ಅಥವಾ, ''ಹರ್ಮೋನ್ ಬೆಟ್ಟ.''

**ಸೀಮೋನ** ಸೀಮೋನನ ಇನ್ನೊಂದು ಹೆಸರು ಪೇತ್ರ.

**ಸೀಸರ** ರೋಮಿನ ಚಕ್ರವರ್ತಿಗೆ ಕೊಡಲ್ಪಟ್ಟ ಹೆಸರು.

**ಸಿದ್ಧತೆಯ ದಿನ** ಶುಕ್ರವಾರ, ಸಬ್ಬತ್ ದಿನದ ಹಿಂದಿನ ದಿನ.

**ಸುನ್ನತಿ** ಜನನಾಂಗದ ಮುಂದೊಗಲನ್ನು ಕತ್ತರಿಸುವುದು. ಪ್ರತಿ ಯೆಹೂದ್ಯ ಗಂಡುಮಗುವಿಗೆ ಹೀಗೆ ಮಾಡುತ್ತಿದ್ದರು. ದೇವರು ಅಬ್ರಹಾಮನೊಂದಿಗೆ ಮಾಡಿದ ಒಡಂಬಡಿಕೆಗೆ ಅದು ಸೂಚನೆಯಾಗಿತ್ತು. ನೋಡಿರಿ. (ಆದಿ. 17:9-14).

**ಸುಗಂಧ ತೈಲ** ನಾರ್ಡ್ ಗಿಡದ ಅಪ್ಪಟ ಬೇರಿನಿಂದ ಮಾಡಿದ ಅತ್ಯಂತ ಬೆಲೆಬಾಳುವ ತೈಲ.

**ಸುಗ್ಗಿಹಬ್ಬ** ಇದನ್ನು ''ಸುಕ್ಕೋತ್'' ಎಂದೂ ಕರೆಯುತ್ತಾರೆ.

**ಸುಕ್ಕೋತ್** ಯೋರ್ದನ್ ನದಿಗೆ ಪೂರ್ವದಲ್ಲಿರುವ ಒಂದು ಊರು. ಈ ಪದದ ಅರ್ಥ: ''ತಾತ್ಕಾಲಿಕ ಆಶ್ರಯಗಳು.''

**ಸುಂಕ ವಸೂಲಿಗಾರರು** ತೆರಿಗೆ ವಸೂಲಿಮಾಡುವುದಕ್ಕೆ ರೋಮನ್ನರಿಂದ ಸಂಬಳಕ್ಕೆ ನೇಮಿಸಲ್ಪಟ್ಟ ಯೆಹೂದ್ಯರು. ಅವರು ಆಗಾಗ್ಗೆ ಮೋಸ ಮಾಡುತ್ತಿದ್ದರು. ಆದ್ದರಿಂದ ಯೆಹೂದ್ಯರು ಅವರನ್ನು ದ್ವೇಷಿಸುತ್ತಿದ್ದರು.

**ಸೇಯೀರ್** ಎದೋಮ್ ಪ್ರದೇಶದ ಮತ್ತೊಂದು ಹೆಸರು.

**ಸೇತ** ಹೀಬ್ರೂ ಭಾಷೆಯಲ್ಲಿ ಈ ಪದಕ್ಕೆ ''ಕೊಡು'' ಎಂಬರ್ಥವಿದೆ.

**ಸೈಪ್ರಸ್** ಅಕ್ಷರಶಃ ''ಎಲೀಷ.'' ಇದು ಎನ್ ಕೋಮಿ, ಸೈಪ್ರಸ್‌ನ ಸಮೀಪದ ಪ್ರದೇಶವಾಗಿದ್ದಿರಬಹುದು. ಅಥವಾ ಗ್ರೀಕ್ ದ್ವೀಪಗಳಲ್ಲಿ ಒಂದಾಗಿರಬಹುದು.

**ಸೊದೋಮ್ ಮತ್ತು ಗೋಮೋರ** ಬಹಳ ಕೆಟ್ಟ ಜನರು ವಾಸಿಸಿದ್ದ ಪಟ್ಟಣ. ದೇವರು ಅವರ ಪಟ್ಟಣವನ್ನು ನಾಶಮಾಡುವುದರ ಮೂಲಕ ಅವರನ್ನು ದಂಡಿಸಿದನು.

## ಹ

**ಹವ್ವ** ಹೀಬ್ರೂ ಭಾಷೆಯಲ್ಲಿ ಈ ಪದಕ್ಕೆ ''ಜೀವ'' ಎಂಬರ್ಥವಿದೆ.

**ಹಮೋನ** ಈ ಹೀಬ್ರೂ ಪದದ ಅರ್ಥ ''ಗುಂಪು.''

**ಹಮೋರನ ಸಂತತಿಯವರು** ಶೆಕೆಮಿನ ನಿವಾಸಿಗಳು. ಹಮೋರನು ಶೆಕೆಮನ ತಂದೆ. ಶೆಕೆಮ್ ನಗರಕ್ಕೆ ಹಮೋರನ ಮಗನ ಹೆಸರು ಇಡಲಾಗಿದೆ.

**ಹಾವು** ಈಜಿಪ್ಟಿನವರು ಹಾಮನ ಸಂತತಿಯವರು. ಆದಿಕಾಂಡ 10:6-10ನ್ನು ನೋಡಿರಿ.

**ಹೆರೋದ** ಜುದೇಯವನ್ನು ಆಳಿದ ಒಂದನೇ ಹೆರೋದನು ಕ್ರಿ.ಪೂ. 40-4.

**ಹೊರ್ಮಾ** ಇದು ''ಸಂಪೂರ್ಣ ನಾಶಮಾಡು'' ಎಂಬ ಅರ್ಥಬರುವ ಶಬ್ದದಂತೆ ಇದೆ.

**ಹೊಸ ಹಾಡು** ದೇವರು ತನ್ನ ಜನರಿಗಾಗಿ ಯಾವುದಾದರೂ ಹೊಸದಾದ ಮತ್ತು ಅದ್ಭುತವಾದ ಕಾರ್ಯವನ್ನು ಮಾಡಿದಾಗಲೆಲ್ಲಾ ಅದರ ಬಗ್ಗೆ ಅವರು ಹೊಸ ಹಾಡನ್ನು ಬರೆಯುತ್ತಿದ್ದರು. ಆದ್ದರಿಂದ ದೇವರು ತನ್ನ ಜನರಿಗಾಗಿ ಹೊಸ ಕಾರ್ಯವನ್ನು ಮಾಡಿದ್ದಾನೆಂದು ಇದು ತೋರಿಸುತ್ತದೆ.

**ಹಿಸ್ಸೋಪ್** ಅಡಿ ಉದ್ದ ಕಾಂಡಗಳಿರುವ ಗಿಡ. ಇದರ ಎಲೆ ಮತ್ತು ಕೊಂಬೆಗಳು ಕೂದಲಿನಂತಿರುತ್ತವೆ. ಹೀಗಾಗಿ ಅದು ಬಣ್ಣ ಬಳಿಯಲು ಉಪಯೋಗವಾಗುತ್ತಿತ್ತು.

**ಹೋಮೆರ್** ಒಂದು ಹೋಮೆರ್ ಆರು ಬುಶೆಲ್ಸ್‌ಗಳಿಗೆ ಸಮವಾಗಿದೆ.

**ಹೆದ್ದುಂಬಿ** ಕಣಜದ ಹುಳ. ದುಂಬಿಯಂತೆ ಕೊಂಡಿಯಿರುವ ಹುಳ. ಇದು ನಿಜವಾದ ಹೆದ್ದುಂಬಿಯಿರಬಹುದು ಅಥವಾ ಇದು ದೇವರ ದೂತನು ಅಥವಾ ಆತನ ಮಹಾಶಕ್ತಿಯೆಂಬ ಅರ್ಥಕೊಡಬಹುದು.

**ಹೃದಯ ಪರಿವರ್ತನೆ** ಅಕ್ಷರಶಃ, ನಿಮ್ಮ ಹೃದಯದ ಮುಂದೊಗಲನ್ನು ಕತ್ತರಿಸಿ ಹಾಕಿರಿ.

**ಹೆರ್ಮೆ** ಮತ್ತೊಬ್ಬ ಗ್ರೀಕ್ ದೇವರು. ಇತರ ದೇವರುಗಳಿಗೆ ಇವನು ಸಂದೇಶಕನೆಂದು ಗ್ರೀಕರು ನಂಬಿದ್ದರು.

## ಶ

**ಶುದ್ಧ ಪ್ರಾಣಿಗಳು** ಯಜ್ಞಕ್ಕೆ ಯೋಗ್ಯವಾದದ್ದೆಂದು ದೇವರಿಂದ ಪರಿಗಣಿಸಲ್ಪಟ್ಟ ಪಕ್ಷಿಗಳು ಮತ್ತು ಪಶುಗಳು.

**ಶುದ್ಧೀಕರಣ** ಯೆಹೂದ್ಯ ಸ್ತ್ರೀಯು ಮಗುವನ್ನು ಹೆತ್ತು ನಲವತ್ತು ದಿನಗಳಾದ ನಂತರ ದೇವಾಲಯದಲ್ಲಿ ನಡೆಸುವ ಒಂದು ಸಂಸ್ಕಾರದ ಮೂಲಕ ಶುದ್ಧಿಯಾಗಬೇಕು ಎಂದು ಮೋಶೆಯ ಧರ್ಮಶಾಸ್ತ್ರ ಹೇಳಿದೆ. ಯಾಜಕ 12:2-8 ಓದಿರಿ.

**ಶುಕ್ರವಾರ** ವಾರದ ಆರನೆ ದಿನ. ಶನಿವಾರ ಸಬ್ಬತ್ ದಿನವಾಗಿತ್ತು. ಸಬ್ಬತ್ ದಿನ ವಿಶ್ರಾಂತಿಯ ದಿನವಾಗಿದ್ದರಿಂದ ಅಂದು ಅವರು ಕೆಲಸ ಮಾಡ ತಕ್ಕದ್ದಾಗಿರಲಿಲ್ಲ.

**ಶೆಕೆಲ್** ಒಂದು ಶೆಕೆಲ್ ಅಂದರೆ ಎರಡೂವರೆ ಔನ್ಸ್.

**ಶೇಷೈ, ಅಹೀಮನ್ ಮತ್ತು ತಲ್ಮೈ** ಈ ಮೂವರು ಅನಾಕನ ಮಕ್ಕಳು. ಅವರು ದೈತ್ಯರಾಗಿದ್ದರು. ನೋಡಿರಿ ಅರಣ್ಯಕಾಂಡ 13:22

**ಶೋಕಬಟ್ಟೆ** ಅಕ್ಷರಶಃ ಗೋಣಿತಟ್ಟು.

**ಶೆಬ** ಇಸ್ರೇಲಿನ ದಕ್ಷಿಣದ ಒಂದು ಪ್ರದೇಶ. ಆ ಕಾಲದಲ್ಲಿ ಸುಗಂಧ ದ್ರವ್ಯಗಳ ವ್ಯಾಪಾರಕ್ಕೆ ಪ್ರಸಿದ್ಧಿ ಯಾಗಿತ್ತು. ಈಗ ಆ ಭಾಗ ಸೌದಿ ಅರೆಬಿಯಾದ ಭಾಗವಾಗಿದೆ.

**ಶೇಷಕ** ಬಾಬಿಲೋನಿನ ರಹಸ್ಯವಾದ ಹೆಸರು.

**ಶೇಷೈ, ಅಹೀಮನ್ ಮತ್ತು ತಲ್ಮೈ** ಈ ಮೂವರು ಅನಾಕನ ಮಕ್ಕಳು. ಅವರು ದೈತ್ಯರಾಗಿದ್ದರು. ನೋಡಿರಿ ಅರಣ್ಯಕಾಂಡ 13:22

**ಶೀಹೋರ್** ಬಹುಶಃ, ನೈಲ್ ನದಿಯ ಪೂರ್ವ ದಿಕ್ಕಿನ ಶಾಖೆಗಳಲ್ಲಿ ಒಂದು.

## ಷ

**ಷೀಬಾ** ಹೀಬ್ರೂ ಭಾಷೆಯಲ್ಲಿ ಈ ಪದದ ಅರ್ಥ: ‘‘ಏಳು’’ ಅಥವಾ ‘‘ಪ್ರಮಾಣ.’’

# ಯೆಹೆಜ್ಕೇಲನು ವರ್ಣಿಸಿರುವ ದೇವಾಲಯದ ಪುನರ್ನಿರ್ಮಾಣ




ಉದ್ದ ಅಳತೆಯಲ್ಲಿ ಮೊಳ 20.67 ಅಂಗುಲ (52.5cm)




## ಹೊರಗಿನ ಅಂಗಳದಲ್ಲಿರುವ ಪೂರ್ವ ಬಾಗಿಲು

Copyright © 2007 by World Bible Translation Center




Copyright © 2007 by World Bible Translation Center




Copyright © 2007 by World Bible Translation Center




Copyright © 2007 by World Bible Translation Center




Copyright © 2007 by World Bible Translation Center



Copyright © 2007 by World Bible Translation Center




Copyright © 2007 by World Bible Translation Center